ಸಂಪುಟ 01 । ಸಂಚಿಕೆ 174 । ಸೋಮವಾರ 18 ಮೇ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ**

ವಸ್ತುಸಂಗ್ರಹಾಲಯ ಮತ್ತು ಸಮಾಜದಲ್ಲಿ ಅದರ ಪಾತ್ರದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ 18 ರಂದು ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನವನ್ನು ಆಚರಿಸಲಾಗುತ್ತದೆ. ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ಮಂಡಳಿ (ICOM) 1977 ರಲ್ಲಿ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನವನ್ನು ರಚಿಸಿತು. ಸಂಸ್ಥೆಯು ಪ್ರತಿ ವರ್ಷ ಜಾಗತೀಕರಣ, ಸಾಂಸ್ಕೃತಿಕ ಅಂತರವನ್ನು ಕಡಿಮೆ ಮಾಡುವುದು ಮತ್ತು ಪರಿಸರದ ಕಾಳಜಿಯನ್ನು ಒಳಗೊಂಡಿರಬಹುದಾದ ಸರಿಯಾದ ವಿಷಯವನ್ನು ಸೂಚಿಸಿತು.

**2) ವಿಶ್ವ ಏಡ್ಸ್ ಲಸಿಕೆ ದಿನ**

ವಿಶ್ವ ಏಡ್ಸ್ ಲಸಿಕೆ ದಿನ ಅಥವಾ ಎಚ್‌ಐವಿ ಲಸಿಕೆ ಜಾಗೃತಿ ದಿನವನ್ನು ಪ್ರತಿ ವರ್ಷ ಮೇ 18 ರಂದು ಆಚರಿಸಲಾಗುತ್ತದೆ. ಸುರಕ್ಷಿತ ಮತ್ತು ಪರಿಣಾಮಕಾರಿ ಏಡ್ಸ್ ಔಷಧವನ್ನು ಕಂಡುಹಿಡಿಯುವ ಪ್ರಕ್ರಿಯೆಗೆ ಕೊಡುಗೆ ನೀಡಿದ ಸಾವಿರಾರು ಸಂಶೋಧಕರು, ವಿಜ್ಞಾನಿಗಳು ಮತ್ತು ಆರೋಗ್ಯ ವೃತ್ತಿಪರರ ಪ್ರಯತ್ನಗಳನ್ನು ಈ ದಿನ ಗುರುತಿಸುತ್ತದೆ. ತಡೆಗಟ್ಟುವ ಎಚ್‌ಐವಿ ಲಸಿಕೆ ಸಂಶೋಧನೆಯ ಮಹತ್ವದ ಬಗ್ಗೆ ಸಮುದಾಯಗಳಿಗೆ ಶಿಕ್ಷಣ ನೀಡುವ ಅವಕಾಶವೂ ಇದಾಗಿದೆ.

## ಸುಭಾಷಿತ

ನಿಮ್ಮ ಗುರಿಗಳನ್ನು ನಿಮ್ಮ ಸಾಮರ್ಥ್ಯದ ಮಟ್ಟಕ್ಕೆ ಇಳಿಸಬೇಡಿ. ಬದಲಾಗಿ, ನಿಮ್ಮ ಸಾಮರ್ಥ್ಯವನ್ನು ನಿಮ್ಮ ಗುರಿಗಳ ಎತ್ತರಕ್ಕೆ ಏರಿಸಿ.

–ಸ್ವಾಮಿ ವಿವೇಕಾನಂದ

## ಕಲಬುರಗಿಯಲ್ಲಿ ₹35 ಕೋಟಿ ವೆಚ್ಚದ ನೂತನ ಸುಸಜ್ಜಿತ ಮೃಗಾಲಯ ಉದ್ಘಾಟನೆ


## ಸಚಿವರಾದ ಈಶ್ವರ ಖಂಡ್ರೆ ಮತ್ತು ಪ್ರಿಯಾಂಕ್ ಖರ್ಗೆ ಚಾಲನೆ

◈ ನೈಜ್ಯ ದೆಸೆ ನ್ಯೂಸ್




ಕಲಬುರಗಿ : ಜಿಲ್ಲೆಯ ಕಾಳಗಿ ತಾಲ್ಲೂಕಿನ ಮಾಡಬೂಳ ಗ್ರಾಮದ ವ್ಯಾಪ್ತಿಯಲ್ಲಿ ಅಂದಾಜಯ ₹35 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ನೂತನ ಕಲಬುರಗಿ ಮೃಗಾಲಯವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು.ಕಲಬುರಗಿ ನಗರದಲ್ಲಿ 1988ರಲ್ಲಿ ಸ್ಥಾಪಿಸಿದ್ದ ಕಿರು ಮೃಗಾಲಯವನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಸೆಕ್ಷನ್ 38(1) ಅಡಿಯಲ್ಲಿ ಮೃಗಾಲಯ ಸ್ಥಾಪನೆಗೆ ಕೇಂದ್ರ ಮೃಗಾಲಯ ಪ್ರಾಧಿಕಾರ ಮತ್ತು ರಾಜ್ಯ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಅನುಮತಿಯೊಂದಿಗೆ ದೊಡ್ಡ ಪ್ರಮಾಣದಲ್ಲಿ ಉನ್ನತೀಕರಿಸಿ ಹಾಗೂ ವಿಸ್ತರಿಸಲಾಗಿದೆ.ಹೊಸ ಮೃಗಾಲಯದಲ್ಲಿ ನಿಶಾಚರ ಪ್ರಾಣಿಗಳಿಗೆ 6, ಭಾರತೀಯ ಪಕ್ಷಿಗಳಿಗೆ 10, ಸಣ್ಣ ಪಕ್ಷಿಗಳಿಗೆ 6, ಫೀಸಂಟ್‌ಗಳಿಗೆ 6, ಸಸ್ತನಿ ತಳಿಗೆ 10, ಪ್ರೈಮೇಟ್‌ಗಳಿಗೆ 4, ಶಾಖಾಹಾರಿ ಪ್ರಾಣಿಗಳಿಗೆ 6 ಹಾಗೂ ಉಭಯಚರ/ಸರೀಸೃಪ ಪ್ರಾಣಿಗಳಿಗೆ 8 ಸೇರಿ ಒಟ್ಟು 56 ಜಾತಿಯ ಪ್ರಾಣಿಗಳಿಗೆ ಆವರಣಗಳು ನಿರ್ಮಾಣವಾಗಲಿವೆ. ಆಮೆ, ಘರಿಯಾಲ್, ಮೊಸಳೆ, ಚುಕ್ಕೆ ಜಿಂಕೆ, ಗೋಲ್ಡನ್ ಜಾಕಲ್, ಹುಲಿ, ಸಿಂಹ, ಸ್ಲೋತ್ ಕರಡಿ, ಜೀಬ್ರಾ, ಬಬೂನ್, ಲಂಗೂರು ಹಾಗೂ ವಿವಿಧ ಪಕ್ಷಿಗಳಿಗಾಗಿ ಒಟ್ಟು 23 ಆವರಣಗಳು ಈಗಾಗಲೆ ಪೂರ್ಣಗೊಂಡಿವೆ.ಸದ್ಯ ಹೊಸ ಮೃಗಾಲಯದಲ್ಲಿ ಆಮೆಗಳು, ಮೊಸಳೆಗಳು, ಎಮು ಪಕ್ಷಿ, ಸಿಲ್ವರ್ ಪೀಸಂಟ್, ಗಿಳಿಗಳು, ನವಿಲುಗಳು, ಜಾಕಲ್, ಕಪ್ಪು ಗಿಡುಗಗಳು, ಲಂಗೂರ್, ಕಪ್ಪು ಜಿಂಕೆಗಳು, ಹೆಬ್ಬಾವುಗಳಿವೆ. ಬೆಂಗಳೂರಿನ ಬನ್ನೇರುಘಟ್ಟದ ಜೈವಿಕ ಉದ್ಯಾನದಿಂದ ಒಂದೂವರೆ ವರ್ಷ ಪ್ರಾಯದ ಎರಡು ಸಿಂಹಗಳು ಈಗಾಗಲೇ ಕಲಬುರಗಿ ಮೃಗಾಲಯಕ್ಕೆ ಬಂದಿವೆ.ಇನ್ನೊಂದು ತಿಂಗಳಲ್ಲಿ ಸಾಂಬರ್, ರೆಡ್ ಜಂಗಲ್ ಫೌಲ್ ಬರಲಿವೆ. ಮುಂದಿನ ಮೂರು ತಿಂಗಳಲ್ಲಿ ಹುಲಿ, ಬಬೂನ್, ಸ್ಲೋತ್ ಕರಡಿ, ಕಾಳಿಂಗ ಸರ್ಪ ನೋಡಲು ಸಿಗಲಿವೆ. ಮುಂದಿನ ತಿಂಗಳಲ್ಲಿ ಜಿಬ್ರಾ, ಘರಿಯಾಲ್ ಹಾಗೂ ಇತರೆ ಪಕ್ಷಿ ಮತ್ತು ಸರೀಸೃಪ ಜಾತಿಗಳ ವನ್ಯ ಜೀವಿಗಳು ಕಲಬುರಗಿ ಮೃಗಾಲಯ ಸೇರಲಿವೆ.ಮೃಗಾಲಯವು ಬೆಳಿಗ್ಗೆ 9.30 ರಿಂದ ಸಂಜೆ 5.30 ವರೆಗೆ ತೆರೆಯಲಿದ್ದು, ಪ್ರಾಣಿ–ಪಕ್ಷಿಗಳ ವೀಕ್ಷಣೆಗೆ ಲಭ್ಯವಾಗಿರಲಿದೆ. ಪ್ರತಿ ಮಂಗಳವಾರ ರಜೆ ಇರಲಿದೆ. 12 ವರ್ಷ ಮೇಲ್ಪಟ್ಟವರಿಗೆ □75, 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ □40 ಹಾಗೂ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ □25 ಟಿಕೆಟ್ ದರ ನಿಗದಿ ಮಾಡಲಾಗಿದೆ. ಮೃಗಾಲಯದ ಟಿಕೆಟ್ ಕೌಂಟರ್‌ನಲ್ಲಿಯೆ ಟಿಕೆಟ್ ಪಡೆದು ವೀಕ್ಷಣೆ ಮಾಡಬಹುದಾಗಿದೆ ಎಂದರು.ಬೆಳಿಗ್ಗೆ 9.30 ರಿಂದ ಸಂಜೆ 5.30 ವೀಕ್ಷಣೆಗೆ ಲಭ್ಯಕಲಬುರಗಿ ಮೃಗಾಲಯ ಉದ್ಘಾಟನೆ ಸಂದರ್ಭದ ಚಿತ್ರಗಳು ಇಲ್ಲಿವೆ





## ಸೇತುವೆ ಕಾಮಗಾರಿ ವೀಕ್ಷಿಸಿದ ಶಾಸಕರು, ಕೆಲಸ ಬೇಗ ಮುಗಿಸಲು ಅಧಿಕಾರಿಗಳಿಗೆ ಖಡಕ್ ಸೂಚನೆ,ಸುದ್ದಿ ಫಲಶೃತಿ

◈ ನೈಜ್ಯ ದೆಸೆ ನ್ಯೂಸ್

ಮಸ್ಕಿ ಸಮೀಪದ ನಾಗಲದಿನ್ನಿ ಸೇತುವೆ ಹಾಗೂ ಸಾನಬಾಳ ಗೆ ಸಂಪರ್ಕಿಸುವ 65 ರ ಮುಖ್ಯ ಕಾಲುವೆ ಮೇಲೆ ನಡೆದಿರುವ ಸೇತುವೆ ಕಾಮಗಾರಿ ಕೆಲಸ ನೆನಗುದಿಗೆ ಬಿದ್ದು ಎರಡು ವರ್ಷವಾಯಿತು,ಮೂರು ದಿನಗಳ ಹಿಂದೆ ಸೇತುವೆ ಕಾಮಗಾರಿ ಕೆಲಸ ನೆನಗುದಿಗೆ,ರೈತರಿಂದ ಅಧಿಕಾರಿಗಳಿಗೆ ದಿಕ್ಕಾರ ಎಂಬ ಸುದ್ದಿಯನ್ನು ಪಾಟೀಲ್ ನ್ಯೂಸ್ ಸುದ್ದಿ



ಪ್ರಸಾರ ಮಾಡಲಾಗಿ–ತ್ತು,ಸುದ್ದಿ ಪ್ರಸಾರ ಬೇನ್ನಲೆ ಎಚ್ಚತ್ತುಕೊಂಡ ಅಧಿಕಾರಿಗಳು, ಗುತ್ತಿಗೆದಾರರು ಸೇರಿ ತಕ್ಷಣವೇ ನಿನ್ನೆಯಿಂದ ಕಾಮಗಾರಿ ಕೆಲಸ ಚುರುಕುಗೊಂಡಿದ್ದು, ಇಂದು ಸ್ಥಳಕ್ಕೆ ಶಾಸಕರಾದ ಆರ್ ಬಸನಗೌಡ ತುರುವಿಹಾಳ ಬೇಟಿ ನೀಡಿ ವೀಕ್ಷಿಸಿದ ನಂತರ ಮಾತನಾಡಿ ಈ ಒಂದು ಕೆಲಸ ರೈತರ ಬಹುದಿನದ ಬೇಡಿಕೆ,ಆದರೆ ಅಧಿಕಾರಿಗಳು, ಗುತ್ತಿಗೆದಾರರ ದಿವ್ಯ ನಿರ್ಲಕ್ಷ್ಯವೇ ಕಾರಣ, ಅದಕ್ಕೆ ಇನ್ನೂ ಒಂದು ತಿಂಗಳೊಗೆ ಕೆಲಸ ಮುಗಿಸಬೇಕು ಇಲ್ಲವಾದರೆ ಮುಂದೆ ಸೂಕ್ತ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಸ್ಥಳದಲ್ಲಿದ್ದ ಅಧಿಕಾರಿ,ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಅಧಿಕಾರಿಗಳು, ಗುತ್ತಿಗೆದಾರರು, ಆ ಭಾಗದ ರೈತರು ಇದ್ದರು.

## ಮೌನ ಮಿತ್ರ ಯೋಗ ಸಮಿತಿ ವತಿಯಿಂದ ಉಚಿತ ಯೋಗ ಶಿಬಿರ ಸಮಾರೋಪ

◈ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಮೌನ ಮಿತ್ರ ಯೋಗ ಸಮಿತಿ ವತಿಯಿಂದ ಆಯೋಜಿಸಿದ್ದ ಉಚಿತ ಯೋಗ ಶಿಬಿರದ ಸಮಾರೋಪ ಸಮಾರಂಭವು ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಡಾ. ವಸಂತ್ ಕುಮಾರ್ ಅವರು, ಇಂದಿನ ವೇಗದ ಹಾಗೂ ಬದಲಾದ ಜೀವನ ಶೈಲಿಯಲ್ಲಿ ಪ್ರತಿಯೊಬ್ಬರೂ ಮಾನಸಿಕ ಒತ್ತಡವನ್ನು ಅನುಭವಿಸುತ್ತಿದ್ದಾರೆ. ಪ್ರತಿದಿನ ಸ್ವಲ್ಪ ಸಮಯ ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗುತ್ತದೆ.



ಜೊತೆಗೆ ರೋಗ ನಿರೋಧಕ ಶಕ್ತಿ ಹೆಚ್ಚಿ ಮನಸ್ಸಿಗೆ ಶಾಂತಿ ದೊರೆಯುತ್ತದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಪಟ್ಟಣದ ಬಸವೇಶ್ವರ ಬ್ಯಾಂಕ್ ವ್ಯವಸ್ಥಾಪಕರಾದ ಚಂದ್ರಮೌಳೇಶ್ವರ ಹಾಗೂ ಅಬಕಾರಿ ಇಲಾಖೆಯ ಪೇದೆ ಭಾರತಿ ಅವರು ಮಾತನಾಡಿದರು.ಈ ಸಂದರ್ಭದಲ್ಲಿ ಮಾಜಿ ನಿವೃತ್ತ ಯೋಧರಾದ ಮಲ್ಲಯ್ಯ ನಾಯಕ ದೇವಿಪುರ, ಕೃಷ್ಣಮೂರ್ತಿ ಕಲ್ಲೂರು ಹಾಗೂ ಆಂಜನೇಯ ಜಲ್ಲಿ ನೀರಮಾನ್ವಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಯೋಗಗುರು ಮೌನೇಶ್ ಪೋತ್ನಾಳ್, ಶ್ರೀಶೈಲ ಗೌಡ, ಯಲ್ಲಪ್ಪ ವಕೀಲರು, ಲಿಂಗರಾಜ್ ಗಡಿಗೆ, ಬಿ. ವಿರೂಪಾಕ್ಷಪ್ಪ (ಗ್ರಂಥಪಾಲಕರು), ನರಸಪ್ಪ ಟೇಲರ್, ಶಿವಪ್ಪ ಮುಂದಿನಮನೆ, ಶಿವಕುಮಾರ್ ತೋಟದ್, ಮಲ್ಲೇಶ್ ಆರ್., ಹನುಮೇಶ್, ಮಲ್ಲಿಕಾರ್ಜುನ, ಭೀಮಣ್ಣ ಸಿ.ಡಿ., ವಿಜಯಕುಮಾರ್, ದೇವಿಕಾ, ರಾಜಶೇಖರ್, ವಿರೂಪಾಕ್ಷಗೌಡ ಹರವಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# "ಹರಿದ ಸೂರಿನಲ್ಲಿ ಬದುಕುತ್ತಿದ್ದ ರಂಗಮ್ಮರಿಗೆ ಮನೆ"

◈ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮೇಲ್ಛಾವಣಿಯೇ ಇಲ್ಲದೆ ಹರಕು ಮನೆಯಲ್ಲಿ ಬದುಕು ಸಾಗಿಸುತ್ತಿದ್ದ ತುಗ್ಗಲದಿನ್ನಿ ಗ್ರಾಮದ ರಂಗಮ್ಮ ನಾಯಕ ಅಜ್ಜಿಗೆ ಇದೀಗ ಸಮಾಜ ಸೇವಕ ಭೀಮಣ್ಣ ಕಾಚಾಪುರ್ ಅವರ ಸಹಾಯದಿಂದ ಮನೆ ದೊರೆತಿದೆ. ಹಲವು ವರ್ಷಗಳಿಂದ ಕಷ್ಟದಲ್ಲಿ ಜೀವನ ನಡೆಸುತ್ತಿದ್ದ ರಂಗಮ್ಮಳಿಗೆ ನಾಲ್ಕು ಗೋಡೆ ಹಾಗೂ ಮೇಲ್ಛಾವಣಿಯೊಂದಿಗೆ ಮನೆ ನಿರ್ಮಿಸಿ ಕೊಟ್ಟಿರುವುದು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಗಿದೆ. ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಹಾಲಾಪುರ ಗ್ರಾಪಂ ವ್ಯಾಪ್ತಿಯ ತುಗ್ಗಲದಿನ್ನಿ ಗ್ರಾಮದಲ್ಲಿ ಸ್ಮಶಾನದ ಸರಕಾರಿ ಜಾಗದಲ್ಲಿ ರಂಗಮ್ಮ ಅಜ್ಜಿ ಸುಮಾರು 30 ವರ್ಷಗಳಿಂದ ಆಸರೆ ಇಲ್ಲದೆ ಬದುಕು ಸಾಗಿಸುತ್ತಿದ್ದರು. ಮೇಲ್ಛಾವಣಿಯಿಲ್ಲದೆ ಆಕಾಶವೇ ಸೂರಾಗಿ ಕಚ್ಚಾ ಮನೆಯಲ್ಲಿ ವಾಸವಾಗಿದ್ದ ಅವರ ಸ್ಥಿತಿ ಕುರಿತು ಇತ್ತೀಚೆಗೆ ಎಪ್ರಿಲ್ 22ರಂದು 'ಮೇಲ್ಛಾವಣಿ ಇಲ್ಲದ ಮನೆಯಲ್ಲಿ ಬದುಕು' ಹಾಗೂ 'ಸ್ವಾಭಿಮಾನದಿಂದ ಏಕಾಂಗಿಯಾಗಿ ಬದುಕುತ್ತಿರುವ ರಂಗಮ್ಮ ಎಂಬ ಶೀರ್ಷಿಕೆಯಲ್ಲಿ ಪತ್ರಿಕಾ ವರದಿ ಪ್ರಕಟವಾಗಿತ್ತು. ವರದಿಗೆ ಸ್ಪಂದಿಸಿದ ಸಮಾಜಸೇವಕ ಹಾಗೂ ನಟ ಭೀಮಣ್ಣ ಕಾಚಾಪುರ್ ತಮ್ಮ ಸ್ವಂತ ಹಣದಲ್ಲಿ ಮನೆ ನಿರ್ಮಿಸಿ ಗೃಹಪ್ರವೇಶ ನೆರವೇರಿಸಿದ್ದು, ಗ್ರಾಮಸ್ಥರು ಮತ್ತು ಸಮಾಜಸೇವಕರು ಅವರನ್ನು ಸನ್ಮಾನಿಸಿದ್ದಾರೆ.



ಗ್ಯಾರಂಟಿ ಕೊಟ್ಟು ನುಡಿದಂತೆ ನಡೆದಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುವ ಆಕ್ರಮ ವಾಸಿಗಳಿಗೆ ಐಷಾರಾಮಿ ಮನೆ ಕೊಡುವ ಸರ್ಕಾರ ಹಾಗೂ ಹತ್ತಾರು ವಸತಿ ಯೋಜನೆ ಇದ್ದರೂ ಇಂತಹ ಬಡವರಿಗೆ ಒಂದು ಸಣ್ಣ ಸೂರು ಒದಗಿಸಲು ಆಗದ ಶಾಸಕರಿಗೆ ನಾಚಿಕೆ ಆಗಬೇಕು ಇಂತಹ ನಿಜವಾದ ಕಳಕಳಿಯ ಸಮಾಜ ಸೇವಕರನ್ನು ಜನತೆ ಆಯ್ಕೆ ಮಾಡಬೇಕು.

## ಸಾಹಿತ್ಯ ಸಿಂಚನ

ಮಗಳು

ಮನೆ ತುಂಬಾ ಓಡಾಡಿದ ಗೆಜ್ಜೆ ಸದ್ದು ನೀನು
ಸಂಜೆಯಾದ್ರೆ ಅಂಗಳದಲ್ಲಿ ಅರಳುವ ಮಲ್ಲಿಗೆ
ನೀನು

ಕೋಪ ಮಾಡಿದ್ರೆ ಮೂತಿ ಊದಿಸೋ ಮುದ್ದು
ಕಂದ
ಪ್ರೀತಿ ತೋರಿಸೋಕೆ ಮಾತಿಲ್ಲದೆ ತಬ್ಬಿಕೊಳ್ಳೋ
ಚಂದ

ಪುಸ್ತಕ ಹಿಡಿದು ಜಗ ಗೆಲ್ಲೋ ಕನಸು ಕಣ್ಣಲ್ಲಿ
ಅಡುಗೆ ಮಾಡಿ ಅಮ್ಮನಿಗೆ ಸಾಥ್ ಕೊಡೋ
ಗುಣದವಳು

ಬೆಟ್ಟವನ್ನೂ ಅಲ್ಲಾಡಿಸೋ ಛಲ ನಿನ್ನ ಉಸಿರಲ್ಲಿ
ಕಲ್ಲು ಮನಸ್ಸನ್ನೂ ಕರಗಿಸೋ ಕರುಣೆ ನಿನ್ನ
ನಗೆಯಲ್ಲಿ

ಹೆಣ್ಣಾಗಿ ಹುಟ್ಟಿದ್ದು ಶಾಪ ಅಲ್ಲ, ವರ
ನೀ ಮಗಳೇ....

– ಎಸ್. ದುರಗಪ್ಪ.ಕುಷ್ಟಗಿ

# "ಪೊಲೀಸರ ವಿರುದ್ಧ ಪತ್ರಕರ್ತರ ತಂಡಕ್ಕೆ ಭರ್ಜರಿ ಜಯ"

**ನೈಜ್ಯ ದೆಸೆ ನ್ಯೂಸ್**

ರಾಯಚೂರು: ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಪೊಲೀಸರು ಮತ್ತು ಪತ್ರಕರ್ತರ ನಡುವೆ ರವಿವಾರ ನಡೆದ ಸೌಹಾರ್ದ ಕ್ರಿಕೆಟ್ ಪಂದ್ಯದಲ್ಲಿ ಪತ್ರಕರ್ತರ ತಂಡ ಒಂಬತ್ತು ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಟಾಸ್ ಗೆದ್ದ ಪತ್ರಕರ್ತರ ತಂಡದ ನಾಯಕ ಸಿದ್ಧಯ್ಯ ಸ್ವಾಮಿ ಮೊದಲಿಗೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿ ಅರುಣಾಂಕ್ಶುಗಿರಿ ಬ್ಯಾಟಿಂಗ್ ಮಾಡುವ ಮೂಲಕ ಪಂದ್ಯಕ್ಕೆ ಚಾಲನೆ ನೀಡಿದರು. ಮೊದಲು ಬ್ಯಾಟಿಂಗ್ ಮಾಡಿದ ಪೊಲೀಸರ ತಂಡ 10 ಓವರ್‌ಗಳಲ್ಲಿ 69 ರನ್ ಗಳಿಸಿತು. ಪತ್ರಕರ್ತರ ತಂಡದ ಆಕ್ರಮಣಕಾರಿ ಬೌಲಿಂಗ್ ದಾಳಿಗೆ ಪೊಲೀಸ್ ತಂಡದ ಆಟಗಾರರು ಹೆಚ್ಚು ಕಾಲ ಕ್ರೀಸ್‌ನಲ್ಲಿ ಉಳಿಯಲಿಲ್ಲ. ಅಣ್ಣಪ್ಪ ಮೇಟಿ, ಲಕ್ಷ್ಮಣ, ಶ್ರೀಕಾಂತ ಹಾಗೂ ಭೀಮೇಶ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದರು. ಉತ್ತಮ ಕ್ಷೇತ್ರ ರಕ್ಷಣೆಯ ಮೂಲಕ ಪತ್ರಕರ್ತರ ತಂಡ ಎದುರಾಳಿಗಳಿಗೆ ಹೆಚ್ಚಿನ ರನ್‌ಗಳನ್ನು ಸೇರಿಸಲು ಅವಕಾಶ ನೀಡಲಿಲ್ಲ. ಎಸ್‌ಪಿ ಅರುಣಾಂಕುಗಿರಿ 19 ರನ್ ಗಳಿಸಿ ನಾಟೌಟ್ ಆಗಿ ಉಳಿದರು.ನಂತರ ಬ್ಯಾಟಿಂಗ್ ಆರಂಭಿಸಿದ ಪತ್ರಕರ್ತರ ತಂಡ ಕೇವಲ ಆರು ಓವರ್‌ಗಳಲ್ಲಿ ಗುರಿ ತಲುಪಿ ಸುಲಭವಾಗಿ



ಜಯ ಸಾಧಿಸಿತು. ಪೊಲೀಸ್ ತಂಡದ ಬೌಲರ್‌ಗಳು ಪತ್ರಕರ್ತರ ಬ್ಯಾಟರ್‌ಗಳನ್ನು ನಿಯಂತ್ರಿಸಲು ವಿಫಲರಾದರು. ಒಂದು ವಿಕೆಟ್ ನಷ್ಟಕ್ಕೆ 70 ರನ್ ಗಳಿಸಿದ ಪತ್ರಕರ್ತರ ತಂಡ ಗೆಲುವು ತನ್ನದಾಗಿಸಿಕೊಂಡಿತು. ಭೀಮೇಶ ಪೂಜಾರ್, ಶ್ರೀಕಾಂತ್ ಸಾವೂರು ಹಾಗೂ ಮಲ್ಲನಗೌಡ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದರು.ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾ-ರಿಗಳಾದ ಹರೀಶ, ಕುಮಾರಸ್ವಾಮಿ, ಡಿವೈ-ಎಸ್‌ಪಿಗಳಾದ ಶಾಂತವೀರ, ಪರಮಾನಂದ ಗೋಡ್ಕೆ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್. ಗುರುನಾಥ, ರಿಪೋರ್ಟರ್ಸ್‌ರ ಗಿಲ್ಡ್ ಅಧ್ಯಕ್ಷ ವಿಜಯಕುಮಾರ್ ಜಾಗಟಗಲ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಪತ್ರಕರ್ತರು ಉಪಸ್ಥಿತರಿದ್ದರು. ಪಂದ್ಯದಲ್ಲಿ ಗೆಲುವು ಸಾಧಿಸಿದ ಪತ್ರಕರ್ತರ ತಂಡಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಕ್ಶುಗಿರಿ ಟ್ರೋಫಿ ವಿತರಿಸಿದರು.

## ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯಿಂದ ಪವಿತ್ರ ಹಜ್ ಯಾತ್ರಿಕರಿಗೆ ಅದ್ದೂರಿ ಸನ್ಮಾನ

**ನೈಜ್ಯ ದೆಸೆ ನ್ಯೂಸ್**

ಲಿಂಗಸೂಗೂರ:ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯ ವತಿಯಿಂದ ಪವಿತ್ರ ಹಜ್ ಯಾತ್ರೆಗೆ ತೆರಳುತ್ತಿರುವ ಯಾತ್ರಿಕರಿಗೆ ವಿಶೇಷ ಸನ್ಮಾನ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಲಾಯಿತು.ಕಾರ್ಯಕ್ರಮದಲ್ಲಿ ಹಜ್ ಯಾತ್ರೆಗೆ ತೆರಳುತ್ತಿರುವ ಎಲ್ಲಾ ಯಾತ್ರಿಕರನ್ನು ಆತ್ಮೀಯವಾಗಿ ಸನ್ಮಾನಿಸಿ, ಅವರ ಪವಿತ್ರ ಯಾತ್ರೆ ಯಶಸ್ವಿಯಾಗಲಿ ಹಾಗೂ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ನೆಲೆಸಲಿ ಎಂದು ವಿಶೇಷ ದುವಾ ಸಲ್ಲಿಸಲಾಯಿತು.ಹಜ್ ಯಾತ್ರೆ ಇಸ್ಲಾಂ ಧರ್ಮದ ಐದು ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದ್ದು, ಪ್ರತಿಯೊಬ್ಬ ಸಾಮರ್ಥ್ಯವಿರುವ ಮುಸ್ಲಿಮರು ಜೀವನದಲ್ಲಿ ಒಮ್ಮೆಯಾದರೂ ನೆರವೇ-ರಿಸಬೇಕಾದ ಪವಿತ್ರ ಧಾರ್ಮಿಕ ಕರ್ತವ್ಯವಾಗಿದೆ.

ಸೌದಿ ಅರೇಬಿಯಾದ ಮಕ್ಕಾ ಮತ್ತು ಮದೀನಾ ಪವಿತ್ರ ಸ್ಥಳಗಳಿಗೆ ತೆರಳಿ ಅಲ್ಲಾಹನ ಆರಾಧನೆ, ಪ್ರಾರ್ಥನೆ ಹಾಗೂ ಆತ್ಮಶುದ್ಧಿಗಾಗಿ ಈ ಯಾತ್ರೆಯನ್ನು ಕೈಗೊಳ್ಳಲಾಗುತ್ತದೆ. ಹಜ್ ಯಾತ್ರೆ ತ್ಯಾಗ, ಸಹನೆ, ಸಮಾನತೆ ಮತ್ತು ಮಾನವೀಯತೆಯ ಸಂದೇಶವನ್ನು ಸಾರುವ ಮಹತ್ವದ ಆಧ್ಯಾತ್ಮಿಕ ಆಚರಣೆಯಾಗಿದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಮುಖಂಡರು, "ಹಜ್ ಯಾತ್ರೆ ಅತ್ಯಂತ ಪವಿತ್ರ ಹಾಗೂ ಶ್ರೇಷ್ಠ ಧಾರ್ಮಿಕ ಯಾತ್ರೆಯಾಗಿದ್ದು, ಯಾತ್ರಿಕರು ದೇಶದ ಸುಖ–ಶಾಂತಿ, ಸಮಾಜದ ಸೌಹಾರ್ದತೆ ಹಾಗೂ ಪ್ರತಿಯೊಬ್ಬರ ಬದುಕಿನಲ್ಲಿರುವ ಕಷ್ಟ–ಕಾರ್ಪಣ್ಯಗಳು ದೂರವಾಗಲೆಂದು ಪ್ರಾರ್ಥ-ನೆ ಸಲ್ಲಿಸಬೇಕು" ಎಂದು ಹೇಳಿದರು.ಈ ಸಂದರ್ಭದಲ್ಲಿ ಅನ್ವರ್ ಸಾಬ್, ಬಾಬಾಜಾನಿ, ಮೌಲಾಸಾಬ್, ಮೊಹಮ್ಮದ್ ಭಾಯಿ, ಫೈಸಲ್ ಭಾಯಿ, ಅಂಜುಮನ್ ಲಿಂಗಸೂಗೂರ ತಾಲೂಕು ಕಮಿಟಿಯ ಗೌರವಾಧ್ಯಕ್ಷ ಅನ್ಸರ್



ಭಾಯಿ, ಅಧ್ಯಕ್ಷ ಹುಸೇನ್ ಭಾಷಾ, ಉಪಾಧ್ಯಕ್ಷ ಮುಸ್ತಫಾ, ಪ್ರಧಾನ ಕಾರ್ಯದರ್ಶಿ ಅಮೀನ್ ಭಾಯಿ ಸೇರಿದಂತೆ ಆರೀಫ್, ಉಬೆದ್ ಚೌದ್ರಿ, ಆದಿಲ್, ರಫಿ ಸಂಪಂಗಿ, ಸಲೀಂ ಭಾಯಿ, ರಜ್ಜಬ್, ಹಜರತ್ ಭಾಯಿ, ವಸೀಮ್, ಅಬ್ಬಾಸ್ ಹಾಗೂ ಅಂಜುಮನ್ ಕಮಿಟಿಯ ಅಪಾರ ಸಂಖ್ಯೆಯ ಬೆಂಬಲಿಗರು ಉಪಸ್ಥಿತ-ರಿದ್ದರು.ಕಾರ್ಯಕ್ರಮವು ಧಾರ್ಮಿಕ ಭಾವೈಕ್ಯತೆ, ಸಹೋದರತ್ವ ಮತ್ತು ಸೌಹಾರ್ದತೆಯ ಸಂದೇಶ ಸಾರುವ ಮೂಲಕ ಯಶಸ್ವಿಯಾಗಿ ನೆರವೇರಿತು.

## ಸಾವಿನ ನಂತರ ಕಣ್ಣು ದಾನ ಮಾಡಿ ಮಾನವೀಯತೆ ಮೆರೆದ ಮಾನವಿಯ.ವಾಸುದೇವ ಶೆಟ್ಟಿ

**ನೈಜ್ಯ ದೆಸೆ ನ್ಯೂಸ್**




ಮಾನವಿ : ಮಾನವಿಯ ಸಾರ್ವಜನಿಕ ಆಸ್ಪತ್ರೆಯ ಕಣ್ಣಿನ ತಜ್ಞ ವೈದ್ಯರಾದ ಡಾಕ್ಟರ ರಾಜೇಶ ನೇತ್ರ ವೈದ್ಯಾಧಿಕಾರಿಗಳು ಹಾಗೂ ರಿಮ್ಸ್ ಆಸ್ಪತ್ರೆಯ ಸ್ನಾತಕೋತ್ತರ ವಿದ್ಯಾರ್ಥಿಗಳ ತಂಡ ಸ್ಥಳೀಯ ಮಾನವಿ ವಾಸುದೇವ ಶೆಟ್ಟಿ ಅವರು ನಿಧನ ನಂತರ ಅವರ ಪಾಲಕರ ವಾಸುದೇವ ಶೆಟ್ಟಿ 70 ವರ್ಷ ಪಂಪಾ ಹೌಸಿಂಗ್ ಕಾಂಪ್ಲೆಕ್ಸ್ ಮಾನವಿ ಅವರ ಆಸೆಯಂತೆ ವೈದ್ಯಾಧಿಕಾರಿಗಳ ತಂಡಕ್ಕೆ. ನೇತ್ರದಾನ ಮಾಡಿಸಿ ಮಾನವೀಯತೆಯ ಮರೆದಿದ್ದಾರೆ ನಂತರ ಮಾತನಾಡಿದ ಡಾಕ್ಟರ ರಾಜೇಶ ನೇತ್ರ ತಜ್ಞರು ಸಾರ್ವಜನಿಕ ಆಸ್ಪತ್ರೆ ಮಾನ್ವಿ ಇವರು ಮಾತನಾಡಿ ದುಃಖದ ಸಮಯದಲ್ಲಿ ಕುಟುಂಬದವರು ವಾಸುದೇವ ಶೆಟ್ಟಿ ಅವರ ಆಸೆಯನ್ನು ಈಡೇರಿಸಿ ಅವರ ಮರಣ ಹೊಂದಿದ್ದರೂ ಕೂಡ ಅವರ ಕಣ್ಣುಗಳು ಮಾತ್ರ ಜೀವಂತವಾಗಿ ಇರಲು ಸಹಕರಿಸಿದ ಕುಟುಂಬ ವರ್ಗಕ್ಕೆ ತುಂಬು ಹೃದಯದ ಧನ್ಯವಾದಗಳು ಸಾವಿನ ನಂತರ ಅಂಗಾಂಗ ದಾನಗಳನ್ನು ಮಾಡುವ ಮೂಲಕ ಮಾನ್ವಿಯತೆಯ ಮರೆಯಲು ಮುಂದೆ ಬರಬೇಕು ಅಂದರು ಈ ಸಂದರ್ಭದಲ್ಲಿ ನೇತ್ರಾಧಿಕಾರಿ ಯಲ್ಲಪ್ಪ ವೆಂಕಯ್ಯ ಶೆಟ್ಟಿ ಫಾರ್ಮಸಿಸ್ಟ್ ಅಧಿಕಾರಿ . ಅವರ ಅಪಾರ ಆತ್ಮೀಯ ಸ್ನೇಹಿತರು ಬಂಧು ಬಳಗ ಕುಟುಂಬಸ್ಥರು ಆತ್ಮೀಯ ಸ್ನೇಹಿತರು ಬಂಧು ಬಳಗ ಕುಟುಂಬಸ್ಥರು ಉಪಸ್ಥಿತರಿದ್ದರು

# ವಿಕಾಸ ಪಬ್ಲಿಕ್ ಶಾಲೆಗೆ ಶೇ.100 ರಷ್ಟು ಫಲಿತಾಂಶ

**ನೈಜ್ಯ ದೆಸೆ ನ್ಯೂಸ್**

ತಾಳಿಕೋಟಿ: ಪಟ್ಟಣದ ವಿಕಾಸ್ ಎಜುಕೇಶನ್ ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿರುವ ವಿಕಾಸ್ ಪಬ್ಲಿಕ್ ಶಾಲೆಗೆ 2025–26 ನೇ ಸಾಲಿನಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ. ಈ ಬಾರಿ ಪರೀಕ್ಷೆಗೆ ಹಾಜರದ 29 ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದಾರೆ. ಇದರಲ್ಲಿ 17 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 11 ವಿದ್ಯಾರ್ಥಿಗಳು ಪ್ರಥ-ಮ ದರ್ಜೆ ಹಾಗೂ ಒಬ್ಬ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿನಿ ಶ್ರೇಯಾ ಬಡಿಗೇರ ಮರು ಮೌಲ್ಯಮಾಪನದಲ್ಲಿ




625ಕ್ಕೆ 611 ಅಂಕ (ಮೊದಲು 610 ಅಂಕ) ಶೇ.97.76 ಪಡೆದು ಶಾಲೆಗೆ ಪ್ರಥಮ ಸ್ಥಾನ. ಕುಮಾರಿ ಪವಿತ್ರಾ ಮಲ್ಕಾಪೂರ ಮರು ಮೌಲ್ಯ ಮಾಪನದಲ್ಲಿ 625ಕ್ಕೆ 608 ಶೇ.97.28(ಮೊದಲು 598 ಅಂಕ) ಪಡೆದು ಶಾಲೆಗೆ ದ್ವಿತೀಯ ಸ್ಥಾನ. ಕುಮಾರಿ ಭಾಗ್ಯಶ್ರೀ ಗುರಜಲಕರ್ 625ಕ್ಕೆ 592 ಅಂಕ ಶೇ.94.72 ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಅಭಿನಂದನೆ: ವಿದ್ಯಾರ್ಥಿನೀಯರ ಈ ಅಮೋಘ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಪಾಧ್ಯಾಯರು, ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದೆ.

## ಜಾಲಹಳ್ಳಿಯಲ್ಲಿ ಭಾರಿ ಮಳೆ – ವಾತಾವರಣ ತಂಪು



**ನೈಜ್ಯ ದೆಸೆ ನ್ಯೂಸ್**

ರಾಯಚೂರು : ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ರವಿವಾರ ಸಂಜೆ ಸುಮಾರು 6:36 ಗಂಟೆಗೆ ಆರಂಭವಾದ ಭಾರಿ ಮಳೆಯು ಸುಮಾರು 45 ನಿಮಿಷಗಳ ಕಾಲ ಸುರಿಯಿತು. ಹಲವು ದಿನಗಳಿಂದ ಕಾಡುತ್ತಿದ್ದ ಬಿಸಿಲು ಹಾಗೂ ಉಷ್ಣತೆಯಿಂದ ಬಸವಳಿದಿದ್ದ ಜನರಿಗೆ ಈ ಮಳೆಯು ತಂಪಿನ ಅನುಭವ ನೀಡಿತು.ಭಾರಿ ಮಳೆಯ ಪರಿಣಾಮ ವಾತಾವರಣ ಸಂಪೂರ್ಣ ತಂಪಾಗಿದ್ದು, ಗ್ರಾಮಸ್ಥರು ನೆಮ್ಮದಿಯ ಉಸಿರೆಳೆದರು. ಬಿಸಿಲಿನ ಧಗೆಯಿಂದ ಕಂಗೆಟ್ಟಿದ್ದ ಜನರಿಗೆ ಈ ಮಳೆಯು ಸಂತಸ ಮೂಡಿಸಿದೆ.

# ಬದಾಮಿ ಸರ್ಕಾರಿ ವೈದ್ಯರಾದ ಡಾಕ್ಟರ್ ವೈ, ಜೆ ,ಮನಿಯಾರ್ ಅವರಿಗೆ ನ್ಯಾಷನಲ್ ಅಚೀವ್ಮೆಂಟ್ ಗ್ಲೋಬಲ್ ಅವಾರ್ಡ್

**ನೈಜ್ಯ ದೆಸೆ ನ್ಯೂಸ್**

ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಸರ್ಕಾರಿ ವೈದ್ಯರಾದ ಡಾ. ವೈ ಜೆ ಮನಿಯಾರ್ ಅವರಿಗೆ ಅವರ ನ್ಯಾಯ, ನಿಷ್ಠೆಯಿಂದ ಪ್ರಾಮಾಣಿಕವಾಗಿ ತಮ್ಮ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಯನ್ನು ಸ್ಮ-ರಿಸುತ್ತಾ ಅಖಿಲ ಕರ್ನಾಟಕ 5ನೆ ಜಾನಪದ ನೃತ್ಯ ಕಲಾಮೇಳ ಕಾರ್ಯಕ್ರಮದಲ್ಲಿ ಡಾಕ್ಟರ್ ವೈ,ಜೆ,ಮನಿಯಾರ ಅವರನ್ನು ಪ್ರತಿಷ್ಠಿತ ನ್ಯಾಷನಲ್ ಅಚೀವ್ಮೆಂಟ್ ಗ್ಲೋಬಲ್ ಅವಾರ್ಡ್ ನಿಡಿ ಶನಿವಾರ ದಿನಾಂಕ 16 ಮೇ 2026 ರಂದು ರಂಗಾಯಣ ಸಭಾಂಗಣ ಧಾರವಾಡದಲ್ಲಿ ಗೌರವಿಸಲಾಯಿತು.ಈ



ಕಾರ್ಯಕ್ರಮಗಳನ್ನು ನೋಡಿ ಜನರ ಅಚ್ಚುಮೆಚ್ಚಿನ ವೈದ್ಯರೆನಿಸಿಕೊಂಡ ಡಾಕ್ಟರ್ ವೈ ಜಿ ಮನಿಯಾರ ಜನರ ಅಚ್ಚು ಮೆಚ್ಚಿನ ಡಾಕ್ಟರ್ ಎಂಬು ವಂತ ಹೆಗ್ಗಳಿಕೆಗೆ ಪಾತ್ರರಾದ ವ್ಯಕ್ತಿ ಬಾದಾಮಿಯ ಜನ ಮೆಚ್ಚುಗೆ ಡಾಕ್ಟರ್ ವೈ ಜೆ ಮನಿಯಾರ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ವೈದ್ಯರಾಗಿದ್ದಾರೆ.ಈ ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ ಸಿದ್ರಾಮು ಎಮ್ ನಿಲಜಗಿ ಹಾಗೂ ಗೌರವಾಧ್ಯಕ್ಷ ಡಾ, ಸಿದ್ದಣ್ಣಾ ಬಾಡಗಿ ಸಂಚಾಲಕ ಡಾ ಜಿ ಎಮು ಬದಾಮಿ ಕಾರ್ಯದರ್ಶಿ ಮೃತ್ಯುಂ–ಜಯ ಧರ್ಮಟ್ಟಿ ಹಾಗೂ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹಿರಿಯ ಮುಖಂಡ ನಾಗರಿಕರು ಉಪಸ್ಥಿತರಿದ್ದರು.

# ಬೂದುಗುಪ್ಪ ಗ್ರಾಮದಲ್ಲಿ ನಮ್ಮ ಹಳ್ಳಿ ಕಲಾ ಸಂಭ್ರಮ ಸಹಾಯಕ ನಿರ್ದೇಶಕ ಬಿ ನಾಗರಾಜ್

**ನೈಜ್ಯ ದೆಸೆ ನ್ಯೂಸ್**

ಸಿರುಗುಪ್ಪ – ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಭಿನಯ ಕಲಾ ಕೇಂದ್ರ ಹಳ್ಳಿಗಳಲ್ಲಿ ಏರ್ಪಡಿಸಿರುವುದು ಶ್ಲಾಘನೀಯ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ ನಾಗರಾಜ್ ಮೆಚ್ಚುಗೆ ವ್ಯಕ್ತಪಡಿಸಿದರು ಸಂಘದ ಅಧ್ಯಕ್ಷರಾದ ಕೆ ಜಗದೀಶ್ ಅವರು ಹೊಸ ನಾಟಕಗಳನ್ನು ರಚಿಸಿ ಹಳ್ಳಿಗಳಲ್ಲಿ ನಿರಂತರ ಕಲಾ ಪ್ರದರ್ಶನ ಮಾಡುತ್ತಿದ್ದಾರೆ ಬೂದುಗುಪ್ಪ ಗ್ರಾಮಕ್ಕೆ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತರಾದ ಇಲಕಲ್ ಉಮಾ ರಾಣಿ ಜಿಲಾನಿ ಭಾಷಾ ಭಾವಳ್ಳಿ ರೇಣುಕಾರಂತಹ ಹಿರಿಯ ಕಲಾವಿದರನ್ನು ಆಹ್ವಾನಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು ಅಭಿನಯ ಕಲಾ ಕೇಂದ್ರ ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು



ಇವರ ಸಹಯೋಗದಲ್ಲಿ ಏರ್ಪಡಿಸಿದ ನಮ್ಮ ಹಳ್ಳಿ ಕಲಾ ಸಂಭ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು ಮಧ್ಯರಾತ್ರಿಯವರೆಗೆ ಪ್ರದರ್ಶನಗೊಂಡ ವಿವಿಧ ಕಾರ್ಯಕ್ರಮಗಳು ಜನಮನ ಸೂರೆ ಗೊಂಡವು ಹಿರಿಯ ಕಲಾವಿದ ಇಲಕಲ್ ಉಮಾ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಕೋರಿದರು ವೇದಿಕೆಯಲ್ಲಿ ಕರ್ನಾಟಕ ರಾಜ್ಯ ಬಯಲಾಟ ಕಲಾವಿದರ ಸಂಘದ ರಾಜ್ಯಧ್ಯಕ್ಷರಾದ ವಿಶ್ವನಾಥ ಸಾಹುಕಾರ ರಂಗಭೂಮಿ ಕಲಾವಿದರಾದ ಭಾವಳ್ಳಿ ರೇಣುಕಾ ಕೂಡ್ಲಿಗಿ ದಿವ್ಯ ಉಪಸ್ಥಿತರಿದ್ದರು ಎಸ್ ಕೆ ಸಮೀರ್ ಅವರ ಏಕ ವ್ಯಕ್ತಿ ನೃತ್ಯ ಡಿ ಎನ್ ರೇಣುಕಾ ಬಾವಳ್ಳಿ ಅವರ ರಂಗಗೀತೆ ಎಸ್ ಕೆ ಜಿವಾನಿ ಭಾಷಾ ತಂಡದ ಸಮೂಹ ನೃತ್ಯ ಆಕರ್ಷಣೀಯವಾಗಿದ್ದವು ರಂಗಗೀತೆಗೆ ಉತ್ತನೂರು ರಾಮಣ್ಣ ರವರ ಹಾರ್ಮೋನಿಯಂ ಸಾಥ್ ಹಳೆಯ ಹಾಡುಗಳನ್ನು ನೆನಪಿಸಿಕೊಂಡರು ಅತ್ತೆ ಸೊಸೆಯರ ಸನ್ನಿವೇಶಗಳಿಂದ ಜನರನ್ನು ನಗೆಗಡಲಲ್ಲಿ ತೇಲಿಸಿದ ಗೀತಾ ಹೂಗಾರ ವಿರಚಿತ ಸಂಗಯ್ಯನ ಸಂಸಾರ ನಾಟಕದಲ್ಲಿ ಇಲಕಲ್ ಉಮಾ ಕೂಡ್ಲಿಗಿ ದಿವ್ಯ ಹಾಗೂ ಬಿ ಗುರುರಾಜ ರಾವ್ ಅಭಿನಯಿಸಿ ಜನ ಮೆಚ್ಚುಗೆ ಪಡೆದರು ಹಳ್ಳಿಗರ ಅಚ್ಚುಮೆಚ್ಚಿನ ಗಾಳಿ ಮಲ್ಲಯ್ಯ ವಿರಚಿತ ಶ್ರೀ ರೇಣುಕಾ ಮಹಾತ್ಮ ಬಯಲಾಟಕ್ಕೆ ಶಿಳ್ಳೆ ಚಪ್ಪಾಳೆ ಮೂಲಕ ಪ್ರೋತ್ಸಾಹಿಸಿದರು ಬೂದುಗುಪ್ಪ ಎರಿಸ್ವಾಮಿಯವರ ಹಾರ್ಮೋನಿಯಂ ವಾದನ ರೋಮಾಂಚಕವಾಗಿ-ತ್ತು ರೇಣುಕಾ ಪಾತ್ರದಲ್ಲಿ ಹಿರೇಹಾಳು ಅನಿತಾ ಮೇನಕಾ ಪಾತ್ರದಲ್ಲಿ ರಾರಾವಿ ನೂರ್ ಜಾ ಜಮದಗ್ನಿ ಪಾತ್ರದಲ್ಲಿ ಶಂಕರ ಬಂಡೆ ಪೀರ ಸಾಬ್ ಪರಶುರಾಮ ಪಾತ್ರದಲ್ಲಿ ಬಸರಕೋಡು ಗಾದಿಲಿಂಗ ಕಾರ್ತ್ಯ ವೀರಾಜುನ ಪಾತ್ರದಲ್ಲಿ ಕೂ-ರಿಗನೂರು ರಮೇಶ ಪ್ರಾಸ ಬದ್ಧ ಮಾತುಗಳಿಗೆ ಜೀವ ತುಂಬಿದರು ತಬಲಾ ಗೋಟೂರು ಗಾದಿಲಿಂಗ ರಿದಂ ಪ್ಯಾಡ್ ವಿಜಯಕುಮಾರ್ ಹೆಚ್ ವೀರಾಪುರ ಈ ಉತ್ಸಾಹಿ ಯುವಕರ ಅಬ್ಬರದ ಸಂಗೀತ ಬಯಲಾಟದ ಕುಣಿತಕ್ಕೆ ಹು-ರಿದುಂಬಿಸಿದವು ಶ್ರೀ ಬಸವೇಶ್ವರ ರಂಗ ಸಜ್ಜಿಕೆಯ ವೇಷಭೂಷಣಗಳು ವರ್ಣ ಮಯವಾಗಿದೆ ಎಂದು ಕರ್ನಾಟಕ ರಾಜ್ಯ ಬಯಲಾಟ ಕಲಾವಿದರ ಸಂಘದ ರಾಜ್ಯ ಅಧ್ಯಕ್ಷರಾದ ವಿಶ್ವನಾಥ ಸಾಹುಕಾರ ತಿಳಿಸಿದರು ಸಾಮಾಜಿಕ ಕಾರ್ಯಕರ್ತ ಸಾಕ್ಷರತಾ ಸದಸ್ಯ ಅಬ್ದುಲ್ ನಬಿ ಇದ್ದರು.

ವರದಿ : ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

## ನೇಮಕಾತಿ ಪ್ರಕಟಣೆ

GESCOM ನೇಮಕಾತಿ 2026 – 275 ಪದವೀಧರ ಮತ್ತು ಡಿಪ್ಲೊಮಾ ಅಪ್ರೆಂಟಿಸ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 14, 2026 GESCOM ನೇಮಕಾತಿ 2026: 275 ಪದವೀಧರ ಮತ್ತು ಡಿಪ್ಲೊಮಾ ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ GESCOM ಅಧಿಕೃತ ಅಧಿಸೂಚನೆ ಮೇ 2026 ರ ಮೂಲಕ ಪದವಿ ಮತ್ತು ಡಿಪ್ಲೊಮಾ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕಲಬುರಗಿ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ಜೂನ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 18–05–2026

## ವಿದ್ಯಾರ್ಥಿನಿ ಸಾಧನೆಗೆ ಗ್ರಾಮಸ್ಥರಿಂದ ಹರ್ಷ ಕುಮಾರಿ ಪವಿತ್ರಾಗೆ ಅಭಿನಂದನೆ

ನೈಜ್ಯ ದೆಸೆ ನ್ಯೂಸ್



ಸಿಂಧನೂರು: ರೈತ ನಗರ ಕ್ಯಾಂಪ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಕುಮಾರಿ ಪವಿತ್ರಾ ಅವರು 2026–27ನೇ ಸಾಲಿನ ಮುರಾರ್ಜಿ ವಸತಿ ಶಾಲೆಗೆ ಆಯ್ಕೆಯಾಗಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಶಾಲೆಗೆ, ಗ್ರಾಮಕ್ಕೆ ಹಾಗೂ ಸಿಂಧನೂರು ತಾಲೂಕಿಗೆ ಕೀರ್ತಿ ತಂದಿದ್ದಾರೆ.ವಿದ್ಯಾರ್ಥಿನಿಯ ಈ ಸಾಧನೆಗೆ ಶಾಲೆಯ ಎಸ್‌ಟಿಎಂಸಿ ಅಧ್ಯಕ್ಷ ಮೈಮುದ್ ಬೇಗ ಕಿಡದೂರ್, ಉಪಾಧ್ಯಕ್ಷರು, ಸದಸ್ಯರು, ಶಾಲೆಯ ಶಿಕ್ಷಕರು, ಪಾಲಕರು ಹಾಗೂ ಊರಿನ ಗುರುಹಿರಿಯರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು. ಸರ್ಕಾರಿ ಶಾಲೆಯಲ್ಲಿಯೇ ಉತ್ತಮ ಶಿಕ್ಷಣ ದೊರೆಯುತ್ತಿದ್ದು, ವಿದ್ಯಾರ್ಥಿಗಳ ಪ್ರತಿಭೆಗೆ ಶಿಕ್ಷಕರ ಮಾರ್ಗದರ್ಶನ ಮತ್ತು ಪಾಲಕರ ಪ್ರೋತ್ಸಾಹವೇ ಮುಖ್ಯ ಕಾರಣವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಶಾಮಿದ್ ಸಾಬ್ ಅವರು, “ಕುಮಾರಿ ಪವಿತ್ರಾ ಅವರು ಚಿಕ್ಕ ವಯಸ್ಸಿನಲ್ಲೇ ಉತ್ತಮ ಸಾಧನೆ ಮಾಡಿರುವುದು ಎಲ್ಲರಿಗೂ ಹೆಮ್ಮೆಯ ವಿಷಯ. ವಿದ್ಯಾರ್ಥಿನಿಯ ಪರಿಶ್ರಮ, ಶಿಕ್ಷಕರ ಶ್ರಮ ಹಾಗೂ ಪಾಲಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ. ನಮ್ಮ ರೈತ ನಗರ ಕ್ಯಾಂಪ್ ಹಾಗೂ ಸಿಂಧನೂರು ತಾಲೂಕಿಗೆ ಈ ಮಗಳ ಸಾಧನೆ ಕೀರ್ತಿ ತಂದಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಿ ಸಮಾಜಕ್ಕೆ ಮಾದರಿಯಾಗಲಿ” ಎಂದು ಶುಭ ಹಾರೈಸಿದರು. ಅದೇ ರೀತಿ ಅವರು ಪಾಲಕರಿಗೆ ಅಭಿನಂದನೆ ಸಲ್ಲಿಸಿ, ಮಕ್ಕಳ ಶಿಕ್ಷಣದ ಕಡೆ ಹೆಚ್ಚಿನ ಗಮನ ಹರಿಸುವಂತೆ ಕರೆ ನೀಡಿದರು. “ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಉತ್ತಮ ಶಿಕ್ಷಕರ ಮಾರ್ಗದರ್ಶನ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಇದ್ದಾರೆ. ಆದ್ದರಿಂದ ಪಾಲಕರು ಸರ್ಕಾರಿ ಶಾಲೆಗಳ ಮೇಲಿನ ನಂಬಿಕೆಯನ್ನು ಹೆಚ್ಚಿಸಿ, ಸರ್ಕಾರಿ ಶಾಲೆಗಳನ್ನು ಬೆಳೆಸಿ ಉಳಿಸಬೇಕು” ಎಂದು ಹೇಳಿದರು.ಶಾಲೆಯ ಶಿಕ್ಷಕರು ಮಾತನಾಡಿ, ವಿದ್ಯಾರ್ಥಿನಿ ಪವಿತ್ರಾ ಅವರು ಶಿಸ್ತಿನಿಂದ ಓದಿ ಉತ್ತಮ ಸಾಧನೆ ಮಾಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯುವ ವಿಶ್ವಾಸವಿದೆ ಎಂದು ತಿಳಿಸಿದರು.ಈ ಸಾಧನೆಯ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿದ್ದು, ಗ್ರಾಮಸ್ಥರು ವಿದ್ಯಾರ್ಥಿನಿಗೆ ಶುಭಾಶಯಗಳನ್ನು ತಿಳಿಸಿ ಸಿಹಿ ಹಂಚಿ ಸಂತಸ ವ್ಯಕ್ತಪಡಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಜಾಲಹಳ್ಳಿಯಲ್ಲಿ ಬಕ್ರೀದ್ ಹಬ್ಬದ ಶಾಂತಿ ಸಭೆ

ನೈಜ್ಯ ದೆಸೆ ನ್ಯೂಸ್



ರಾಯಚೂರು ಮೆ 17 : ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಅಂಗವಾಗಿ ಶಾಂತಿ ಸಭೆ ನಡೆಯಿತು. ದೇವದುರ್ಗ ವಿಭಾಗದ ನೂತನ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಪುಂಡಲಿಕ್ ಅವರ ನೇತೃತ್ವದಲ್ಲಿ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸೆಐ ವೈಶಾಲಿ ಜಳಕಿ ವಹಿಸಿದ್ದರು. ಪ್ರೊಬಿಷನರಿ ಪಿಎಸೆಐ ರವಿಕುಮಾರ್ ಅತಿಥಿಗಳಾಗಿ ಉಪಸ್ಥಿತರಿದ್ದರು.ಸಭೆಯಲ್ಲಿ ಮಾತನಾಡಿದ ಪಿಎಸೆಐ ವೈಶಾಲಿ ಜಳಕಿ ಅವರು, ಬಕ್ರೀದ್ ಹಬ್ಬವನ್ನು ಎಲ್ಲಾ ಮುಸ್ಲಿಂ ಬಾಂಧವರು ಹಾಗೂ ಎಲ್ಲಾ ಸಮಾಜದವರು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು ಎಂದು ಕರೆ ನೀಡಿದರು. ಇದೇ ವೇಳೆ ಎಲ್ಲಾ ಮುಸ್ಲಿಂ ಬಾಂಧವರಿಗೆ ಬಕ್ರೀದ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು.ನೂತನ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಪುಂಡಲಿಕ್ ಅವರು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಹಬ್ಬವನ್ನು ಆಚರಿಸಬೇಕು ಎಂದು ತಿಳಿಸಿದರು. ಜೊತೆಗೆ ವಾಟ್ಸಾಪ್, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಯುವಕರು ಎಚ್ಚರಿಕೆಯಿಂದ ಇರಬೇಕು ಎಂದು ಸಲಹೆ ನೀಡಿದರು.ಜಾಮಿಯಾ ಮಸೀದಿ ಅಧ್ಯಕ್ಷರಾದ ಬಾಬಾ ಮೆಡಿಕಲ್ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಜಾಲಹಳ್ಳಿ ಈದ್ಗಾದಲ್ಲಿ ಬೆಳಿಗ್ಗೆ 9:00 ಗಂಟೆಗೆ ಪ್ರಾರ್ಥನೆ ನಡೆಯಲಿದೆ ಎಂದು ಹೇಳಿದರು. ಜಾಲಹಳ್ಳಿಯಲ್ಲಿ ಎಲ್ಲಾ ಸಮಾಜದವರು ಪ್ರೀತಿ ಮತ್ತು ಸೌಹಾರ್ದದಿಂದ ಹಬ್ಬಗಳನ್ನು ಆಚರಿಸುವ ಪರಂಪರೆ ಇದೆ ಎಂದು ತಿಳಿಸಿದರು.ಸಾಬಣ್ಣ ಕಮಲದಿನ್ನಿ ಮಾತನಾಡಿ, ದೇವದುರ್ಗ ವಿಭಾಗದ ನೂತನ ಸರ್ಕಲ್ ಇನ್ಸ್‌ಕ್ಟರ್ ಪುಂಡಲಿಕ್ ಸಾಹೇಬರಿಗೆ ಸ್ವಾಗತ ಕೋರಿದರು. ಬಕ್ರೀದ್ ಹಬ್ಬದಲ್ಲಿ ಶ್ರೀಮಂತರು ಬಡವರಿಗೆ ಸಹಾಯ ಮಾಡುವ ಪದ್ಧತಿ ಇರುವುದಾಗಿ ತಿಳಿಸಿ, ಜಾಲಹಳ್ಳಿ ಭಾಗವು ಶಾಂತಿ ಮತ್ತು ಸೌಹಾರ್ದತೆಗೆ ಹೆಸರಾಗಿದೆ ಎಂದು ಹೇಳಿದರು.ಸಭೆಯಲ್ಲಿ ಬಸವರಾಜ್ ಪಂಪಪತಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು, ಶ್ರೀದರ ದೇಸಾಯಿ, ಶಂಕರಗೌಡ, ದುರುಗಪ್ಪ ರಾಮಪಳಿ, ನರಸಣ್ಣ ನಾಯಕ, ಖುರ್ಷಿದ್ ಪಟೇಲ್, ಸಾಬಣ್ಣ ಕಮಲದಿನ್ನಿ, ಇಮಾಮಸಾಬ್ ಉದ್ದಾರ್, ಅಮರೇಶ್ ಭವಾನಿ, ಚನ್ನಪ್ಪ ಸೌದ್ರಿ, ಗುರು ತೋಟದ್, ಅಪ್ಪು ಪಾಟೀಲ್ ಮುದುಗೊಟ್, ಯಾಸಿನ್ ಮುಲ್ಲಾ, ರಾಜ್ ಮಹಮ್ಮದ್ ಕಲೆಗಾರ, ರಂಗಪ್ಪ ತೊಗರಿ, ವೆಂಕೋಬ



ಪೂಜಾರಿ, ಜಹೀರ್ ಮುರುಷದ್ ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರಾದ ಮಕತುಮ್ ಪರಾಶಿ, ರಮೇಶ್ ತೆಗ್ಗಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಭಾಗವಹಿಸಿದ್ದರು.

# ವಿಜೃಂಭಣೆಯಿಂದ ಜರುಗಿದ ಗ್ರಾಮ ದೇವತೆ ಜಾತ್ರೋತ್ಸವ

ನೈಜ್ಯ ದೆಸೆ ನ್ಯೂಸ್




ತಾಳಿಕೋಟೆ: ತಾಲ್ಲೂಕಿನ ಲಿಂಗದಳ್ಳಿ ಗ್ರಾಮದಲ್ಲಿ ಗ್ರಾಮದೇವತೆ ಜಾತ್ರಾಮಹೋತ್ಸವವು ಶುಕ್ರವಾರ ಸಡಗರ ಸಂಭ್ರಮಗಳಿಂದ ನೆರವೇರಿತು. ಬೆಳಿಗ್ಗೆ ವೈಭವಯುತವಾಗಿ ಗಾರುಡಿ ಗೊಂಬೆ ಕುಣಿತ. ಮಹಿಳೆಯರ ಡೊಳ್ಳುಕುಣಿತ. ಜೋಗತಿನೃತ್ಯ ಗಳೊಂದಿಗೆ ಮೆರವಣಿಗೆ ಜರುಗಿತು. ಸಾಯಂಕಾಲ ನಡೆದ ಧರ್ಮಸಭೆ ಹಾಗೂ ಸನ್ಮಾನ ಸಮಾರಂಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಲಾಳೇಸಾಬ ಶೇಖ (ಜಮಾದಾರ)ಹಾಗೂ ಗ್ರಾಮದ ನಿವೃತ್ತ ಸೈನಿಕರಾದ ರಾಚಯ್ಯಸ್ವಾಮಿ ಹಿರೇಮಠ ಬಾಪುಗೌಡ ಪಾಟೀಲ. ಧನಸಿಂಗ ನಾಯಕ ಅವರನ್ನು ಸನ್ಮಾನಿಸಲಾಯಿತು. ಶೇಖ ಸರ್ ಮಾತನಾಡಿ ಗ್ರಾಮವು ಎಲ್ಲರನ್ನು ಸಮಾನವಾಗಿ ಕಾಣುವ ಬಸವತತ್ವ ಅಳವಡಿಸಿಕೊಂಡಿದೆ.ಯುವಕರು ಒಗ್ಗಟ್ಟಿನಿಂದ ಗ್ರಾಮಾಭಿವೃದ್ಧಿಗೆ ಶ್ರಮಿಸಲು ಕರೆನೀಡಿದರು. ದಿವ್ಯ ಸಾನಿಧ್ಯ ವಹಿಸಿದ್ದ ಸಂತೆಕೆಲ್ಲೂರಿನ ಶ್ರೀ ಮ.ನಿ ಪ್ರಗುರುಬಸವ ಮಹಾಸ್ವಾಮಿಗಳು ಮಕ್ಕಳು ಸಂಸ್ಕಾರಯುತವಾಗಿ ಬೆಳೆಯಲು ಮೊದಲು ಪಾಲಕರು ಮೊಬೈಲ್ ತೊರೆದು ಶಿಸ್ತಿನ ಜೀವನಕ್ರಮ ಪಾಲಿಸಬೇಕು.ಯುವಕರು ದುಶ್ಚಟಗಳನ್ನು ಬಿಡಬೇಕು.ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಜಗದೀಶ ಬಸಯ್ಯಸ್ವಾಮಿ ಹಿರೇಮಠ ಅವರು ಸ್ವಾಗತಿಸಿದರು, ಶಿಕ್ಷಕ ಅಪ್ಪಾಸಾಹೇಬ ಮೂಲಿಮನಿ ನಿರೂಪಿಸಿದರು ಅಯ್ಯನಗೌಡ ನಾಡಗೌಡ,ಬಸನಗೌಡ ಬಸರಕೋಡ,ಬಸನಗೌಡ ಮೇಟಿ.ಮಲ್ಲನಗೌಡ ಬಿರಾದಾರ. ಅಪ್ಪಾಸಾಹೇಬಗೌಡ ಬಿರಾದಾರ. ಕಾಶಿರಾಯಗೌಡ ಬಿರಾದಾರ. ಶಾಂತಕುಮಾರ ಚಟ್ಟೇರ. ಬಸನಗೌಡ ಮೇಟಿ.ರಾಮನಗೌಡ ಬಿರಾದಾರ. ಪ್ರಭುಗೌಡ ಬಿರಾದಾರ. ಪ್ರಕಾಶ ದೊರಿಗೋಳ. ಉಪಸ್ಥಿತರಿದ್ದರು. ನಂತರ ಎ.ಎನ್ ಕಲಾತಂಡ ಹುನಗುಂದ ಇವ–



ರಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು

# ಕ್ಷುಲ್ಲಕ ಕಾರಣಕ್ಕೆ ತಮ್ಮನಿಂದಲೇ ಅಣ್ಣನಿಗೆ ದಿಬ್ಬಿನಿಂದ ಉಸಿರುಗಟ್ಟಿಸಿ ಕೊಲೆ,ಅರೋಪಿ ಬಂಧನ





ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಮೇ 18 ಕ್ಷುಲ್ಲಕ ಕಾರಣಕ್ಕೆ ತಮ್ಮನಿಂದಲೇ ಅಣ್ಣನ ಕೊಲೆ ಮಾಡಿದ ಘಟನೆ ಲಿಂಗಸಗೂರಿನ ವಾರ್ಡ್ ನಂಬರ್ 4 ರ ಸಿದ್ದರಾಮೇಶ್ವರ ಶಾಲೆಯ ಬಳಿ ನಡೆದಿದೆ .ದಿನಾಂಕ 16 ರ ಮದ್ಯಾಹ್ನ 12–30 ರ ಸುಮಾರಿಗೆ ಮೃತ ಬಸವರಾಜ್ ತಂದೆ ವಾಸುದೇವ ವಯಸ್ಸು –32 ಮೃತ ವ್ಯಕ್ತಿ ಈತನು ಕಂಠ ಪೂರ್ತಿ ಕುಡಿದು ಮನೆಗೆ ಬಂದಿದ್ದು – ಮನೆಯಲ್ಲಿದ್ದ ತಾಯಿ ತನ್ನ ಮಗನಿಗೆ ಊಟ ಮಾಡಲು ಹೇಳಿದ್ದು, ಆತನು ನಾನು ಊಟ ಮಾಡುವುದಿವೆಂದು ತಾಯಿಗೆ ಅವ್ಯಾಚ ಶಬ್ದದಿಂದ ಬೈದು ವಾಪಾಸ್ ಮನೆಯಿಂದ ಹೊರಗೆ ಹೋಗಿ ಸುಮಾರು 2–30 ರ ಹೊತ್ತಿಗೆ ಮತ್ತೆ ಕುಡಿದುಕೊಂಡು ವಾಪಾಸ್ ಮನೆಗೆ ಬಂದಾಗ ತಮ್ಮನಾದ ( ಆರೋಪಿತ ) ಶ್ರೀಧರ್ ತಂದೆ ವಾಸುದೇವ ಈತನು ಕುಡಿದು ಬಂದು ತಾಯಿಗೆ ಅವ್ಯಾಚ ಶಬ್ದದಿಂದ ಬಯ್ಯಬಾರದು ಅಂತ ಹೇಳಿದಕ್ಕೆ ಆತನೊಂದಿಗೆ ಜಗಳ ಮಾಡಿ ಶ್ರೀಧರನಿಗೆ ಚೂರಿಯಿಂದ ಗಾಯಗೊಳಿಸಿದನು. ಆಗ ಆರೋಪಿತ ಶ್ರೀಧರ್ ತನ್ನ ಕೈಯಿಂದ ಅಣ್ಣನಿಗೆ ಒಂದು ಏಟು ತಲೆಗೆ ಹೊಡೆದಾಗ ತಾಯಿ ಜಗಳ ಬಿಡಿಸಿಕೊಳ್ಳಲು ಬಂದಾಗ ಮೃತ ಬಸವರಾಜನು ಮತ್ತೆ ತನ್ನ ತಾಯಿಗೆ ಅವ್ಯಾಚ ಶಬ್ದದಿಂದ ಬೈದನು ಆಗ ತನ್ನ ತಾಯಿ ಮೃತ ಬಸವರಾಜನಿಗೆ ಸಮಾಧಾನ ಮಾಡಿ ತಾನು ಹಾಲ್ ರೂಮ್ ನಲ್ಲಿ ಮಲಗಿದಳು, ಆರೋಪಿ ಶ್ರೀಧರ್ ಸಹ ಮಲಗಿದನು. ಸಂಜೆ 4 ಗಂಟೆ ಸುಮಾರಿಗೆ ಎದ್ದು ಯಾರು ಇಲ್ಲದನ್ನು ನೋಡಿ ನನಗೂ ಮತ್ತು ನನ್ನ ತಾಯಿಗೂ ಕುಡಿದುಬಂದು ಅವ್ಯಾಚ ಶಬ್ದದಿಂದ ಬಯ್ಯುತ್ತಾನೆ ಈತನನ್ನು ಬಿಡಬಾರದೆಂದು ಮೃತ ಅಣ್ಣ ( ಬಸವರಾಜ್ ) ಮಲಗಿದ್ದ ಬೆಡ್ ರೂಮ್ ಗೆ ಹೋಗಿ ಅಲ್ಲಿಯೇ ಇದ್ದ ತಲೆ ದಿಂಬನ್ನು ತೆಗೆದು ಬಾಯಿಗೆ ಒತ್ತಿ ಹಿಡಿದು ಉಸಿರು ಗಟ್ಟಿ ಸತ್ತಾಗ , ಈ ಕೊಲೆ ನನ್ನ ಮೇಲೆ ಬರಬಾರದೆಂದು , ಅಲ್ಲೇ ಇದ್ದ ಸೀರೆ ತೆಗೆದು ಕೊರಳಿಗೆ ಹಾಕಿ ಬಿಗಿಯಾಗಿ ಎಳೆದು, ಬೆಡ್ ರೂಮ್ ಬಾಗಿಲಿಗೆ ಚೀಲಕ ಮುರಿದಂತೆ ಮಾಡಿ ತನ್ನ ತಾಯಿಗೆ ಸುಳ್ಳು ಹೇಳಿ ಅರೋಪಿ ಶ್ರೀಧರ್ ಮತ್ತು ತಾಯಿ ಆತನನ್ನು ಸರಕಾರಿ ಆಸ್ಪತ್ರೆಗೆ ತಂದಾಗ ವೈದ್ಯರು ಮೃತಪಟ್ಟಿದ್ದನ್ನ ತಿಳಿಸಿದ್ದಾರೆ . ನಂತರ ಈ ವಿಚಾರ ಆರೋಪಿ ಶ್ರೀಧರ್ ತನ್ನ ತಂದೆ ಮತ್ತು ತಾಯಿಗೆ ತಿಳಿಸಿದ್ದಾನೆ. ತಂದೆ ವಾಸುದೇವ ಕೊಟ್ಟ ದೂರಿನ ಮೇಲೆ ಪೊಲೀಸರು ಆರೋಪಿ ಶ್ರೀಧರನನ್ನ ಬಂಧಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆಂದು ತಿಳಿದು ಬಂದಿದೆ .

# ಹಳೇ ವಿದ್ಯಾರ್ಥಿಗಳಿಂದ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಪಟ್ಟಣದ ಹಳೆಯ ಶ್ರೀ ರಾಮಕೃಷ್ಣ ಹಿರಿಯ ಪ್ರಾಥಮಿಕಯಲ್ಲಿನ 2002–2003 ನೇ ಸಾಲಿನ 7ನೇ ತರಗತಿ ವಿದ್ಯಾರ್ಥಿಗಳು ಭಾನುವಾರ ತಾಲೂಕಿನ ರಾಮಸಾಗರ ಸಮೀಪದ ಪಂಪ ವಿದ್ಯಾಪೀಠ ಬಳಿಯ ತುಂಗಭದ್ರಾ ರಿವರ್ ವ್ಯೂ ರೆಸಾರ್ಟ್‌ನಲ್ಲಿ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ರಾಮಕೃಷ್ಣ ಹಿರಿಯ ಪ್ರಾಥಮಿಕಯ ನೆಚ್ಚಿನ ಗುರುಗಳಿಗೆ ಅದ್ದೂರಿ ಸ್ವಾಗತ ಕೋರಿದರು.ವಿದ್ಯಾರ್ಥಿಗಳು ಶಿಕ್ಷಕರು ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಸಮಾರಂಭದ ಉದ್ದಕ್ಕೂ ಹಲವು ನೆನಪುಗಳನ್ನು ಮೆಲುಕು ಹಾಕಲಾಯಿತು.ಹಳೇಯ ವಿದ್ಯಾರ್ಥಿಗಳು ತಮಗೆ ವಿದ್ಯೆ ಕಲಿಸಿದ ಎಲ್ಲಾ ಗುರುಗಳಿಗೆ ಸನ್ಮಾನ ಮಾಡುವ ಮೂಲಕ ಗುರುಭಕ್ತಿ ಮೆರೆದರು.ತಮಗೆ ಅಕ್ಷರ ಕಲಿಸಿದ ಶಿಕ್ಷಕರನ್ನ ಹಲವು ವರ್ಷಗಳ ನಂತರ ಕಂಡ ವಿದ್ಯಾರ್ಥಿಗಳು ಸಂತಸ ಪಟ್ಟರು .ತಮ್ಮನ್ನು ಇನ್ನೂ ನೆನಪಿಟ್ಟು ಸನ್ಮಾನಿಸುತ್ತಿರುವ ಮಕ್ಕಳ ಪ್ರೀತಿಯನ್ನು ಕಂಡ ಶಿಕ್ಷಕರ ಕಣ್ಣಂಚಿನಲಿ ಆನಂದಭಾಷ್ಪ ಸುರಿಸಿದರು. ದೈಹಿಕ ಶಿಕ್ಷಕ ರಮೇಶ ಮಾತನಾಡಿ ಹಳೇ ವಿದ್ಯಾರ್ಥಿಗಳು ತಮಗೆ ವಿದ್ಯೆ ಕಲಿಸಿದ ಶಿಕ್ಷಕರನ್ನು ಸ್ಮರಿಸಿ ಗುರುವಂದನೆ ಕಾರ್ಯಕ್ರಮ ಕೈಗೊಂಡಿದ್ದು ನಿಜಕ್ಕೂ ಸಂತಸ ತಂದಿದೆ. ಬಾಲ್ಯದಲ್ಲಿ ವಿದ್ಯೆ ಕಲಿಯುವಾಗ ಸಾಕಷ್ಟು ಮಕ್ಕಳಿಗೆ ಗುರುಗಳ ಶ್ರಮದ ಬಗ್ಗೆ ಅರಿವಿರುವುದಿಲ್ಲ. ಮಕ್ಕಳ ಭಾವನೆಯಲ್ಲಿ ಗುರುಗಳೆಂದರೆ ಕೇವಲ ಶಿಕ್ಷಿಸುವ ಹಾಗೂ ದೈನಂದಿನ ಪಠ್ಯ ಬೋಧಿಸುವರೆಂದೇ ಭಾವಿಸಿರುತ್ತಾರೆ. ಹತ್ತಾರು ವರ್ಷ ಕಳೆದಾಗ ಶಿಕ್ಷಕರ ಶ್ರಮ ಮತ್ತು ಮಹತ್ವ ಅರಿತು ಗೌರವಿಸುತ್ತಾರೆ ಎಂದರು.ನಂತರ ಮಾತನಾಡಿದ ಮುಖ್ಯಗುರು ವಿ. ರಾಮಚಂದ್ರರಾವ ಉದ್ಯೋಗ ಇನ್ನಿತರೆ ಕಾರಣಗಳಿಗಾಗಿ ಹುಟ್ಟಿದ ಊರು ಬಿಟ್ಟು ಬೇರೆಲ್ಲೋ ನೆಲೆಸಿದವರು ತಮ್ಮ ದಿನನಿತ್ಯದ ಒತ್ತಡ ಜೀವನದಲ್ಲಿ ಹುಟ್ಟಿದ ಊರು, ಹೆತ್ತವರು, ಅಕ್ಷರ ಕಲಿಸಿದ ಗುರುಗಳನ್ನು ನೆನೆಸಿಕೊಳ್ಳಲಾಗದ ಸ್ಥಿತಿಗೆ ಇಂದಿನ ಜನ ತಲುಪಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಿರಿಯ ವಿದ್ಯಾರ್ಥಿಗಳೆಲ್ಲರನ್ನೂ ಒಟ್ಟುಗೂಡಿಸುವ, ತಮ್ಮ ಹಳೆಯ ದಿನಗಳನ್ನು ಮೆಲುಕು ಹಾಕುವಂತಹ ಸುಂದರ ಕ್ಷಣಗಳಿಗೆ ಸಾಕ್ಷಿಯಾದ ಇಂತಹ ಕಾರ್ಯಕ್ರಮ ಇಂದಿನ ದಿನಗಳಲ್ಲಿ ಅಗತ್ಯವಿದೆ. ಆ ಮೂಲಕ ಬಾಲ್ಯದ ನೆನಪುಗಳನ್ನು ಮತ್ತೆ ಪಡೆಯಬಹುದು ಎಂದು ಅಭಿಪ್ರಾಯಪಟ್ಟರು.ಆ ನಂತರ ಎಲ್ಲಾ ಶಿಕ್ಷಕರು ತಮ್ಮ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಹಳೆ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಮೆಲಕು ಹಾಕಿ ಆನಂದಭಾಷ್ಪ ಗೈದು ಮಾತನಾಡಿ ನಾವು ಗಳಿಸಿದ ಆಸ್ತಿ, ಅಂತಸ್ತು, ಸಂಪತ್ತು ಯಾವುದೂ ಕೊನೆಯವರೆಗೂ ಉಳಿಯೊಲ್ಲ. ಆದರೆ ಕಲಿತ ವಿದ್ಯೆ ಮಾತ್ರ ಕೊನೆಯವರೆಗೂ ಜೊತೆಗಿರುತ್ತದೆ ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ಬಾಲ್ಯದಲ್ಲಿ ನೀವು ನೀಡಿದ ನಿಸ್ವಾರ್ಥ ಶಿಕ್ಷಣದ ಪರಿಣಾಮ ನಾವುಗಳು ನಮ್ಮ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಯಿತು. ಎಂದು ಗುರುಗಳ ಸೇವೆಯನ್ನು ಮುಕ್ತಕಂಠದಿಂದ ಹೊಗಳಿದರು.ಈ ಸಂದರ್ಭದಲ್ಲಿ ಶಿಕ್ಷಕರಾದ ವಿ. ರಾಮಚಂದ್ರರಾವ್, ಕೆ. ರಮೇಶ, ಪದ್ಮ, ಜಯಲಕ್ಷ್ಮಿ, ಶಾಂತಾ ಇವರನ್ನು ಅದ್ದೂರಿಯಾಗಿ ಸನ್ಮಾನಿಸಿ ಗೌರವಿಸಲಾಯಿತು.ಇನ್ನೂ ಊಟವಂತೂ ತಿಂದಷ್ಟು ಮತ್ತೆ ಮತ್ತೆ ರುಚಿಯಾಗಿತ್ತು. ಉಸ್ತುವಾರಿ ವಹಿಸಿದ್ದ ಗೆಳೆಯರನ್ನು ಹೊಗಳಿದ್ದೇ ಹೊಗಳಿದ್ದು. ಒಂದೆಡೆ ಸೇರಿದ ಸ್ನೇಹಿತರೆಲ್ಲರೂ ಸಕ್ಕತ್ ಹಾಡುಗಳಿಗೆ ಸ್ಟೆಪ್ ಹಾಕಿದ್ರೆ ಇನ್ನು ಕೆಲವು ಕುಚುಕುಗಳು ಇಡೀ ದಿನ ಸಮಯ ಕಳೆದಿದ್ದೆ ಗೊತ್ತಾಗಲಿಲ್ಲ ಎಂದು ಗೊಣಗುತ್ತ ಸಮಾರಂಭದ ನಂತರ ಹಳೇಯ ನೆನುಪುಗಳೊಂದಿಗೆ ಹಿಂತಿರುಗಿದರು. ಈ ಸಂದರ್ಭದಲ್ಲಿ. 2002– 03 ನೇ ಸಾಲಿನ 7ನೇ ತರಗತಿ ವಿದ್ಯಾರ್ಥಿಗಳಾದ ಕೆ. ಶ್ವೇತಾ, ಜೆ. ಬಿ. ವಿನಾಯಕ, ನವೀನ್,ಧನಪಾಲ್ ಕಿರಣ್, ಸಾಗರ್, ಎನ್. ಮಂಜುನಾಥ, ದೀಪಾಶ್ರೀ, ದೀಪಾ ಕೆ. ಎಂ. ಜಿ. ರೇಖಾ, ಯು. ವನಜಾಕ್ಷಿ, ಕೆ. ತುಳುಸಿ, ವೀರನಗೌಡ, ಎನ್. ಪ್ರೀತಿ, ಸಂತೋಷ, ಈ. ನಾಗರಾಜ, ಶ್ರುತಿ, ಈಶ್ವರಿ, ಸಿ. ಕೆ. ಮಂಜುನಾಥ, ಸಂದೀಪ್ ಬಿ., ಲಿಂಗರಾಜ್, ವಿನಾಯಕ, ಬಿ. ವೆಂಕಟೇಶ, ಎಸ್. ಉಮೇಶ, ರೇಖಾ ಎಂ. ರಘು, ಮಂಜು ಎಂ, ರಾಘವೇಂದ್ರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಪ್ಲಂಬರ್

ಐಟಿಐ ಪ್ಲಂಬರ್ ಕೋರ್ಸ್ ವಿವರಗಳು ಗೃಹೋಪಯೋಗಿ ಉಪಕರಣಗಳ ದುರಸ್ತಿ, ಅಳವಡಿಕೆ, ನಿರ್ವಹಣೆ, ಪರೀಕ್ಷೆ, ಸಮೀಕ್ಷೆ, ಅಳವಡಿಕೆ, ನೀರು ಸರಬರಾಜು ಉಪಕರಣಗಳು, ಕಂಪನಿ, ಕೃಷಿ ಮತ್ತು ಇನ್ನೂ ಅನೇಕ ವಿಷಯಗಳಲ್ಲಿ ನೀವು ಆಸಕ್ತಿ ಹೊಂದಿದ್ದರೆ ನೀವು ಐಟಿಐ ಪ್ಲಂಬರ್ ಕೋರ್ಸ್‌ಗೆ ಸೇರಬಹುದು. ಐಟಿಐ ಪ್ಲಂಬರ್ ಅರ್ಹತೆ ನೀವು ಕನಿಷ್ಠ ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣರಾಗಿರಬೇಕು. ಐಟಿಐ ಪ್ಲಂಬರ್ ಕೋರ್ಸ್ ಅವಧಿ ಇದು ಸುಮಾರು 1 ವರ್ಷದ (2 ಸೆಮಿಸ್ಟರ್‌ಗಳು) ಕೋರ್ಸ್ ಆಗಿದೆ. ಐಟಿಐ ಪ್ಲಂಬರ್ ಕೋರ್ಸ್ ಶುಲ್ಕಗಳು ಸಂಸ್ಥೆ ಅಥ–ವಾ ರಾಜ್ಯ (ಸರ್ಕಾರ) ಪ್ರಕಾರ ರೂ. 1500 – 3000 ಸಂಸ್ಥೆ (ಖಾಸಗಿ) ಪ್ರಕಾರ ರೂ. 10000 – 30000 ಐಟಿಐ ಪ್ಲಂಬರ್ ಕೋರ್ಸ್‌ನ ಪ್ರಮಾಣಪತ್ರಗಳು NCVT – ರಾಷ್ಟ್ರೀಯ ಮಂಡಳಿ ವೃತ್ತಿಪರ ತರಬೇತಿ (ಶಿಫಾರಸು ಮಾಡಲಾಗಿದೆ) SCVT – ರಾಜ್ಯ ಮಂಡಳಿ ವೃತ್ತಿಪರ ತರಬೇತಿ ಕೋರ್ಸ್ ಪ್ರಕಾರಗಳು ವೃತ್ತಿಪರ ತರಬೇತಿ ಕೋರ್ಸ್ ಐಟಿಐ ಪ್ಲಂಬರ್ ವಿಷಯಗಳು ಮತ್ತು ಪಠ್ಯಕ್ರಮ ವ್ಯಾಪಾರ ಸಿದ್ಧಾಂತ ವ್ಯಾಪಾರ ಪ್ರಾಯೋಗಿಕ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಎಂಜಿನಿಯರಿಂಗ್ ರೇಖಾಚಿತ್ರ ಉದ್ಯೋಗಾರ್ಹತಾ ಕೌಶಲ್ಯಗಳು ಪ್ಲಂಬರ್‌ನ ಕೌಶಲ್ಯಗಳು ಒಬ್ಬ ಪ್ಲಂಬರ್ ನೀರು ಸರಬರಾಜು ಘಟಕಗಳು, ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯನ್ನು ಸ್ಥಾಪಿಸುವ, ದುರಸ್ತಿ ಮಾಡುವ ಮತ್ತು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಮತ್ತು ಅವರು ನೀರು ಸರಬರಾಜು ಉಪಕರಣಗಳು ಮತ್ತು ಪರಿಕರಗಳ ಜ್ಞಾನವನ್ನು ಹೊಂದಿರುತ್ತಾರೆ.

# "ಸಾಧು ವೇಷದಲ್ಲಿ ಅರ್ಧ ತೊಲೆ ಬಂಗಾರ, 10 ಸಾವಿರ ರೂ. ದೋಚಿದ ಅಪರಿಚಿತ"

ನೈಜ್ಯ ದೆಸೆ ನ್ಯೂಸ್

ಸಿಂಧನೂರು –: ಸಾಧು ವೇಷದಲ್ಲಿದ್ದ ಅಪ–ರಿಚಿತ ವ್ಯಕ್ತಿಯೋರ್ವ ಅಂಗಡಿ ಮಾಲಕ–ರಿಗೆ ಹೂ ನೀಡಿ, ಅರ್ಧ ತೊಲೆ ಬಂಗಾರ ಹಾಗೂ ಅಂಗಡಿಯಲ್ಲಿದ್ದ 10,500 ರೂ. ಹಣ ದೋಚಿಕೊಂಡು ಪರಾರಿಯಾದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ನಗರದ ಕುಷ್ಟಗಿ ಮುಖ್ಯರಸ್ತೆಯಲ್ಲಿರುವ ಸಾಯಿ ಮೆಡಿಕಲ್ ಮತ್ತು ಜನರಲ್ ಸ್ಟೋರ್ ಮಾಲಕ ವಿಷ್ಣುದತ್ತ ಮೋಹನ್ ದತ್ತ ಅವರು ಈ ಕುರಿತು ಶಹರ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಸಾಧು ವೇಷ ಧರಿಸಿಕೊಂಡು ಭಿಕ್ಷುಕನಂತೆ ಸಂಚರಿಸುತ್ತಿದ್ದ ಅಪರಿಚಿತ ವ್ಯಕ್ತಿ ಅಂಗಡಿ ಮುಂಭಾಗದಲ್ಲಿದ್ದ ನೀರಿನ ಕ್ಯಾನ್ ಬಳಿ ಬಂದು ನೀರು ಕುಡಿಯಲು ಕೇಳಿದ್ದಾನೆ. ಮಾನವೀಯತೆ




ದೃಷ್ಟಿಯಿಂದ ಅಂಗಡಿ ಮಾಲಕರು ಅಂಗಡಿಯೊಳಗಿನ ಫ್ರಿಜ್‌ನಲ್ಲಿದ್ದ ತಣ್ಣೀರನ್ನು ನೀಡಿದ್ದರು. ಈ ವೇಳೆ ಅಪರಿಚಿತ ವ್ಯಕ್ತಿ ತನ್ನ ಬಳಿ ಇದ್ದ ಎರಡು ಹೂಗಳನ್ನು ಅಂಗಡಿ ಮಾಲಕರ ಕೈಗೆ ನೀಡಿ ಮಾತಿನ ಮಂತ್ರದಿಂದ ಅವರನ್ನು ಬದಲಕ್ಕೀಡಾಗಿಸಿದ್ದಾನೆ ಎನ್ನಲಾಗಿದೆ. ಬಳಿಕ ಆತ ದಂತೆ ನಡೆದುಕೊಂಡ ಅಂಗಡಿ ಮಾಲಕರ ಕೈಯಲ್ಲಿದ್ದ ಅರ್ಧ ತೊಲೆ ಬಂಗಾರದ ಆಭರಣ ಹಾಗೂ ವ್ಯಾಪಾರದ ಹಣವಾಗಿದ್ದ 10,500 ರೂ. ದೋಚಿಕೊಂಡು ಪರಾರಿಯಾಗಿದ್ದಾನೆ. ಸ್ವಲ್ಪ ಸಮಯದ ಬಳಿಕ ಘಟನೆ ಅರಿವಿಗೆ ಬಂದಾಗ ಆರೋಪಿಯು ಅಲ್ಲಿಂದ ಪರಾ–ರಿಯಾಗಿದ್ದನು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಘಟನೆಯಲ್ಲಿ ಭಾಗಿಯಾದ ಸಾಧು ರೂಪದ ವ್ಯಕ್ತಿಯ ಭಾವಚಿತ್ರ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಆರೋಪಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮಾಜದ ಮುಖಂಡರು ಸಾರ್ವಜನಿಕರು ಭಾಗವಹಿಸಿದ್ದರು.

## "ಕುಡಿದು ಗಲಾಟೆ ಮಾಡಿದ ಅಣ್ಣನ ಕೊಲೆ"


ನೈಜ್ಯ ದೆಸೆ ನ್ಯೂಸ್




ಲಿಂಗಸುಗೂರು –: ದಿನನಿತ್ಯ ಪಾನಮತ್ತರಾಗಿ ಮನೆಯಲ್ಲಿ ಗಲಾಟೆ ಮಾಡುತ್ತಿದ್ದ ಅಣ್ಣನನ್ನೇ ಸ್ವಂತ ತಮ್ಮನೇ ಕೊಲೆ ಮಾಡಿದ ಘಟನೆ ಪಟ್ಟಣದ ಬಸವಸಾಗರ ವೃತ್ತದ ಸಿದ್ದರಾಮೇಶ್ವರ ಶಾಲೆ ಹತ್ತಿರ ಶನಿವಾರ ರಾತ್ರಿ ನಡೆದಿದೆ. 32 ವರ್ಷದ ಬಸವರಾಜ ತಂದೆ ವಾಸುದೇವ ಕೊಲೆಯಾದ ವ್ಯಕ್ತಿಯಾಗಿದ್ದಾನೆ.ಈತ ನಿತ್ಯವೂ ಕುಡಿದು ಬಂದು ಮನೆಯಲ್ಲಿ ತನ್ನ ತಾಯಿ ಹಾಗೂ ಸಹೋದರನಿಗೆ ಅವಾಚ್ಯವಾಗಿ ನಿಂದನೆ ಮಾಡುತ್ತಿದ್ದ, ಅದರಂತೆ ಶನಿವಾರ ಮಧ್ಯಾಹ್ನ ಕುಡಿದು ಗಲಾಟೆ ಮಾಡುತ್ತಿದ್ದರಿಂದ 27 ವರ್ಷದ ಶ್ರೀಧರ ತನ್ನ ಅಣ್ಣನಿಗೆ ಬುದ್ದಿ ಹೇಳಿದರೂ ಕೇಳಿದಿದ್ದಾಗ ಬೇಸತ್ತ ಶ್ರೀಧರ ತನ್ನ ಅಣ್ಣ ಬಸವರಾಜನನ್ನು ತಲೆತಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ ಎಂದು ತಂದೆ ವಾಸುದೇವ ನೀಡಿದ ದೂರಿನ್ವಯ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆ ನಡೆದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿ ತನಿಖೆ ಕೈಗೊಂಡಿದ್ದಾರೆ.

## ಗುದದ್ವರಾದ ಫಿಶರ್

ನೈಜ್ಯ ದೆಸೆ ನ್ಯೂಸ್




ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿರುವ ಆರೋಗ್ಯ ಸಮಸ್ಯೆಗಳಲ್ಲಿ ಫಿಶರ್ , ಫಿಸ್ತುಲ್ಲಾ ಹಾಗೂ ಪೈಲ್ಸ್ ಅಧಿಕವಾಗಿವೆ. ಇದಕ್ಕೆ ಕಾರಣ ಶ್ರಮದಾಯಕವಲ್ಲದ ಜೀವನಶೈಲಿ,ಆಹಾರ ಸೇವನಾ ಪದ್ಧತಿ.ಪಿಶರ್, ಫಿಸ್ತುಲಾ, ಪೈಲ್ಸ್ ಇವುಗಳನ್ನು ಜನರು ಒಂದೇ ಎಂದು ತಿಳಿದಿದ್ದಾರೆ ಆದರೆ ಇವು ಬೇರೆ ಬೇರೆಯಾಗಿವೆ ಫಿಶರ್ ಲಕ್ಷಣಗಳು :ಕರುಳಿನಲ್ಲಿ ಮಲದ ಚಲನೆ ಕಷ್ಟವಾಗಿ ಗುದದ್ವಾರದಲ್ಲಿ ಬಿರುಕು ಉಂಟಾಗಿ ಫಿಶರ್ ಕಾಣಿಸುತ್ತದೆ ಅಲ್ಲದೆ ಅತಿಸಾ,ರ ವಾತದಿಂದಾಗಿ ಉಂಟಾಗುವುದು, ಹೆರಿಗೆ ವೇಳೆಯಲ್ಲಿ ಗುದಪ್ರದೇಶ ತೊಂದರೆಗೋಳಗಾಗಿ ಪಿಶರ್ ಉಂಟಾಗುತ್ತದೆ .ಮಲ ವಿಸರ್ಜನೆ ಸಮಯದಲ್ಲಿ ನವೆಗಳು,ಬಿರುಕು ಉಂಟಾಗಿ ನೋವು ಉಂಟಾಗುತ್ತದೆ ಕೆಲವೊಮ್ಮೆ ರಕ್ತಸ್ರಾವ ಉಂಟಾಗಬಹುದು ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.ಗುಣಪಡಿಸುವುದು ಹೇಗೆ: ಫಿಶರ್ ಹೆಚ್ಚಾಗಿ ತನ್ನಿಂದ ತಾನೇ ಗುಣಮುಖವಾಗುವುದು ಅಥವಾ ಶಸ್ತ್ರಚಿಕಿತ್ಸೆಯಿಲ್ಲದೆ ಗುಣಪಡಿಸಬಹುದು ಮಲವು ಸರಾಗವಾಗಿ ಆಗಲು ಹ–ರಿತಕಿ,ಗುಡುಚಿ ನಾರಿನಂಶ ಇರುವ ಆಹಾರ ಪದಾರ್ಥಗಳ ಯತೆಚ್ಚ ಬಳಕೆ,ಏಳ ರಿಂದ –ಎಂಟು ತಾಸು ಸುಖ ನಿದ್ರೆ, ಮೇಲಿಂದ ಮೇಲೆ ನೀರು ಕುಡಿಯುವುದು, ಗುದ ಪ್ರದೇಶವನ್ನು ಸ್ವಚ್ಚವಾಗಿ ಮತ್ತು ಮೃದುವಾದ ಟವಲ್ಲಿಂದ ನಿಧಾನವಾಗಿ ವರಿಸಿಕೊಳ್ಳಬೇಕು ನೋವಿಗೆ ನಿವಾರಣೆಗಾಗಿ ಟಬನಲ್ಲಿ ಉಗುರು ಬೆಚ್ಚಗಿನ ನೀರನಲ್ಲಿ ದೇಹದ ಕೆಳಭಾಗವನ್ನು 10 ರಿಂದ 15 ನಿಮಿಷ ಕುಳಿತುಕೊಳ್ಳಬೇಕು ಆಹಾರ ಕ್ರಮ: ಇಂದಿನ ದಿನಮಾನಗಳಲ್ಲಿ ಪ್ರತಿ ಹಳ್ಳಿ,ಗ್ರಾಮ ನಗರಗಳು ಎಲ್ಲಾ ಕಡೆ ಸಮೋಸ,ಗೋಬಿ ಮಂಚೂ–ರಿ,ಪಾನಿಪುರಿ ಅಂಗಡಿಗಳು ಹೆಚ್ಚಾಗಿವೆ ಜನರು ಪ್ರತಿಯೊಬ್ಬರು ಒಂದಲ್ಲ ಒಂದು ದಿನ ಇವುಗಳನ್ನು ಅತಿಯಾಗಿ ಸೇವಿಸುವುದರಿಂದ ಮಲವು ಸಾರಾಗವಾಗಿ ಆಗದೆ ಗಟ್ಟಿಯಾಗಿ ಬರುತ್ತದೆ.ಆದ್ದ–ರಿಂದ ಇಂಥವುಗಳನ್ನೆಲ್ಲ ಸೇವಿಸದೆ ನಮ್ಮ ಪಾರಂಪರಿಕ ಆಹಾರ ಪದ್ಧತಿಗಳಾದ ಜೋಳದ ರೊಟ್ಟಿ, ತರಕಾರಿಗಳು ಯಥೇಚ್ಛವಾಗಿ ನೀರನ್ನು ಕುಡಿಯುವುದು ನಾರಿನಂಶ ಇರುವ ಆಹಾರ ಪದಾರ್ಥಗಳನ್ನು ಬಳಸುವುದು ನಿಯಂತ್ರಣಕ್ಕೆ ಸಹಕಾರಿ ಆಗಿವೆ ಅಲ್ಲದೆ ಅತಿಯಾಗಿ ದೈಹಿಕ ಶ್ರಮ,ಮಾನಸಿಕ ಒತ್ತಡ ವನ್ನು ವರ್ಜಿಸಬೇಕು ಮಾಂಸ ಸೇವನೆ, ಅಲ್ಕೋಹಾಲ್ ಸೇವನೆ ಬಿಡಬೇಕು..

ಡಾ ಮಂಜುನಾಥ ಎ ಅಣಗೌಡರ್ ನಿಡಗುಂದಿ
BAMS CYS DHFM

## ವೃದ್ದೆಗೆ ಸೂರೊದಗಿಸಿದ ಭೀಮಣ್ಣ ನಾಯಕ— ಮಾನವೀಯತೆ ಮೆರೆದ ನಟ


ನೈಜ್ಯ ದೆಸೆ ನ್ಯೂಸ್



ಕವಿತಾಳ: ಪಟ್ಟಣ ಸಮೀಪದ ತುಗ್ಗಲದಿನ್ನಿ ಗ್ರಾಮದಲ್ಲಿ ಮಾನವೀಯತೆ ಮೆರೆದ ಘಟನೆೊಂದು ಬೆಳಕಿಗೆ ಬಂದಿದೆ. ಗ್ರಾಮದ ರಂಗಮ್ಮ ಎಂಬ ವೃದ್ಧೆಗೆ ಚಲನಚಿತ್ರ ನಟ ಭೀಮಣ್ಣ ನಾಯಕ ಕಾಚಾಪುರ ಅವರು ಸ್ವಂತ ಖರ್ಚಿನಲ್ಲಿ ಸೂರು ನಿರ್ಮಿಸಿ ಕೊಟ್ಟು ಸಹಾಯ ಹಸ್ತ ಚಾಚಿದ್ದಾರೆ.ರಂಗಮ್ಮ ಅವರು ಹಲವು ದಿನಗಳಿಂದ ಬಯಲಲ್ಲೇ ವಾಸಿಸುತ್ತಿದ್ದು ಸಂಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು. ಈ ವಿಷಯ ತಿಳಿದ ಭೀಮಣ್ಣ ನಾಯಕ ಅವರು ಗ್ರಾಮಸ್ಥರೊಂದಿಗೆ ಚರ್ಚಿಸಿ, ಕೇವಲ ಒಂದು ವಾರದಲ್ಲೇ ವೃದ್ಧೆಗೆ ವಾಸಿಸಲು ಹೊಸ ಸೂರು ನಿರ್ಮಿಸಿ ಕೊಟ್ಟರು.ನೂತನ ಸೂರಿನಲ್ಲಿ ಬುದ್ಧ, ಬಸವಣ್ಣ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಗಳನ್ನು ಅಲಂಕರಿಸಿ ಶನಿವಾರ ತೋರಣ ಕಟ್ಟುವ ಮೂಲಕ ಪೂಜಾ ಕಾರ್ಯ ನೆರವೇರಿಸಲಾಯಿತು. ಬಳಿಕ ರಂಗಮ್ಮ ಅವರು ಹೊಸ ಮನೆಯಲ್ಲಿ ಹಾಲುಕ್ಕಿಸಿ ಸಂತಸ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಗ್ರಾಮಸ್ಥರೊಂದಿಗೆ ಸಿಹಿ ಭೋಜನ ಏರ್ಪಡಿಸಲಾಗಿದ್ದು, ಸಮಾಜಮುಖಿ ಕಾರ್ಯಕ್ಕಾಗಿ ಭೀಮಣ್ಣ ನಾಯಕ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಇದು ಮಾನವೀಯತೆ ಮತ್ತು ಸಾಮಾಜಿಕ ಬದ್ಧತೆಯ ಉತ್ತಮ ಉದಾಹರಣೆಯಾಗಿ ಗ್ರಾಮದಲ್ಲಿ ಪ್ರಶಂಸೆಗೆ ಪಾತ್ರವಾಗಿದೆ.

## ಕಾರುಣ್ಯಾಶ್ರಮದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಾಗೂ ಡಾ. ಚನ್ನಬಸವ ಸ್ವಾಮಿಗಳಿಗೆ ಗೌರವ

ನೈಜ್ಯ ದೆಸೆ ನ್ಯೂಸ್



ಲಿಂಗಸೂಗೂರು – ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆ ಲಿಂಗಸುಗೂರು ತಾಲೂಕ ಘಟಕದ ಅಧ್ಯಕ್ಷರಾದ ವಿಜಯಲಕ್ಷ್ಮೀ ಹಿರೇಮಠ ಇವರು ತಮ್ಮ ಲಿಂಗಸೂಗೂರಿನ ನಿವಾಸದಲ್ಲಿ ಸಿಂಧನೂರಿನ ಕಾರುಣ್ಯಾಶ್ರಮದ ಸದಸ್ಯರಾದ ಡಾ.ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಹಾಗೂ ಡಾ. ಚನ್ನಬಸವ ಸ್ವಾಮಿ ಹಿರೇಮಠ ಇವರುಗಳನ್ನು ಸನ್ಮಾನಿಸಿ ಗೌರವಿಸಿ ಸತ್ಕರಿಸಿದರು. ನಂತರ ವಿಜಯಲಕ್ಷ್ಮಿ ಹಿರೇಮಠ ಮಾತನಾಡಿ ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮದ ಇವರುಗಳನ್ನು ಪಿತಾಮಹಗಳೆಂದು ಕರೆಯಬಹುದು. ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರು ಅಂಗವಿಕಲರಾಗಿ ನ್ಯೂನತೆಯಿಂದ ಬಳಲುತ್ತಿದ್ದರೂ ಸಹ ಸಮಾಜಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿರುವುದು ನಮ್ಮ ಲಿಂಗಸೂಗೂರಿಗೆ ಗೌರವ ತಂದು ಕೊಟ್ಟಿದೆ. ಇವರ ಆದರ್ಶವನ್ನು ನಾವು ನೀವೆಲ್ಲರೂ ಪಾಲಿಸುವ ಮೂಲಕ ನಮ್ಮ ಹೆತ್ತವರ ಹೆಸರು ತರಬೇಕು. ಕಾರುಣ್ಯ ಕುಟುಂಬದ ಕಣ್ಣಾದ ಇವರುಗಳು ಸಮಾಜದ ಆಸ್ತಿಯಾಗಿದ್ದಾರೆ. ಮತ್ತು ವಿಶೇಷವಾಗಿ ಇದೇ ತಿಂಗಳು 24ನೇ ದಿನಾಂಕದಂದು ಗೋವಾ ರಾಜ್ಯದ ಪಣಜಿ ನಗರದಲ್ಲಿ ಅಶೋಕ ಪ್ಲಾಜಾ ಹೋಟೆಲ್ ನಲ್ಲಿ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರಿಗೆ ಕದಂಬ ಫೌಂಡೇಶನ್ ಗೋವಾ ಹಾಗೂ ಸುವರ್ಣ ಫೋಕಸ್ ಕನ್ನಡ ದಿನಪತ್ರಿಕೆಯ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮದಲ್ಲಿ ಬುದ್ಧ ಬಸವ ಅಂಬೇಡ್ಕರ್ ಜಯಂತಿ ಅಂಗವಾಗಿ "ಗೋಲ್ಡನ್ ಮ್ಯಾನ್ ಆಫ್ ದಿ ಅವಾರ್ಡ್ " ಎನ್ನುವ ಶ್ರೇಷ್ಠ ಪ್ರಶಸ್ತಿ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ನಾವೆಲ್ಲರೂ ಕೂಡ ಹರಸಿ ಹಾರೈಸುತ್ತೇವೆ ಎಂದು ಮುಂಚಿತವಾಗಿಯೇ ಶುಭ ಕೋ–ರಿದರು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವಸ್ವಾಮಿ ಹಿರೇಮಠ. ಸಾಗರ್ ಹಿರೇಮಠ ಶರಣಪ್ಪ ನಾಯಕ ಕಸಬಾ ಲಿಂಗಸೂಗೂರು. ಆಶ್ರಮದ ಸಿಬ್ಬಂದಿಯಾದ ಮರಿಯಪ್ಪ ನಾಯಕ. ಮತ್ತು ವೀರೇಶ ಟಿ. ಸಿ. ಸ್ಟುಡಿಯೋ ಲಿಂಗಸೂಗೂರು ಇವರುಗಳು ಉಪಸ್ಥಿತರಿದ್ದರು

## ಸಿಡಿಲು ಬಡಿದು ಯುವಕ ಸಾವು

ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು : ಸಿಡಿಲು ಬಡಿದು ಯುವಕ ಸಾವಿಗೀಡಾದ ಘಟನೆ ಲಿಂಗಸಗೂರು ತಾಲೂಕಿನ ಕೋಮಲಾಪುರ ಗ್ರಾಮದಲ್ಲಿ ಇಂದು ಮಧ್ಯಾಹ್ನ ಜರುಗಿದೆ .ಕೋಮಲಾಪುರ ಗ್ರಾಮದ ಕರಿಯಪ್ಪ ತಂದೆ ಅಯ್ಯಪ್ಪ ವಯಸ್ಸು 40 ವರ್ಷ ಗಿಣಕೀಹಾಳ್ ಈತನು ಹೊಲದಲ್ಲಿ ಗೊಬ್ಬರ ಏರುವ ಸಮಯದಲ್ಲಿ ಸಿಡಿಲು ಬಡಿದು ಸವನ್ನಪ್ಪಿದ ದುರ್ದೈವಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

## ತಾಲೂಕು ಕಚೇರಿಯಲ್ಲಿ ಸಮನ್ವಯ ಸಮಿತಿ ಸಭೆ

ನೈಜ್ಯ ದೆಸೆ ನ್ಯೂಸ್



ಸಿರುಗುಪ್ಪ–ನಗರದ ತಹಶೀಲ್ದಾರ್ ಕಚೇ–ರಿಯಲ್ಲಿ ರಾಷ್ಟ್ರೀಯ ಡೆಂಗೇ ದಿನಾಚರಣೆ ಮತ್ತು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಕುರಿತು ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳ ಸಹಕಾರ ಸಮನ್ವಯ ಸಮಿತಿ ಸಭೆ ಶುಕ್ರವಾರ ನಡೆಯಿತು ಉಪ ತಹಶೀಲ್ದಾರ್ ಸಿದ್ಧಾರ್ಥ ಕಾರಂಜಿ ಮಾತನಾಡಿ ರಾಷ್ಟ್ರೀಯ ಡೆಂಗೇ ದಿನವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ ಡೆಂಗೇ ಜ್ವರ ತಡೆಗಟ್ಟುವಿಕೆ ರೋಗ ಲಕ್ಷಣಗಳ ಜಾಗೃತಿ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಈಡಿಸ್ ಸೊಳ್ಳೆಗಳಿಂದ ಹರಡುವ ರೋಗದ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು ಪೋಲಿಯ ಮುಕ್ತ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದಲ್ಲಿ ಈ ಲಸಿಕೆ ಹಾಕುವ ಮೂಲಕ ಪೋಲಿಯೊ ಅಂಗವಿಕಲತೆಯಿಂದ ಮಕ್ಕಳನ್ನು ರಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು ತಾಲೂಕು ಆರೋಗ್ಯ ಅಧಿಕಾರಿ ಡಾ ದಮ್ಮೂರು ಬಸವರಾಜ್ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮೊಹಮ್ಮದ್ ಖಾಸಿಂ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಸದಸ್ಯರು ಸಾಮಾಜಿ–ಕ ಕಾರ್ಯಕರ್ತ ಅಬ್ದುಲ್ ನಬಿ ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಭೀಮರಾಜ್ ಸೇರಿ ಇತರರಿದ್ದರು.

ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

# ನೀಟ್ ಪೇಪರ್ ಲೀಕ್ ಖಂಡಿಸಿ ಮೇ 19ರಂದು ಎಸ್ ಐ ಓ ಸಿಂದನೂರು ವತಿಯಿಂದ ಬೃಹತ್ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

ಸಿಂದನೂರು, ಮೇ 19:ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ ಹಾಗೂ ವಿದ್ಯಾರ್ಥಿಗಳ ಭವಿಷ್ಯ ರಕ್ಷಿಸುವಂತೆ ಆಗ್ರಹಿಸಿ ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಶನ್ (ಖಖಔ) ಸಿಂದನೂರು ಘಟಕ ವತಿಯಿಂದ ಮೇ 19ರಂದು ಬೃಹತ್ ಪ್ರತಿಭಟನೆ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ. ದೇಶದಾದ್ಯಂತ ನೀಟ್ ಪರೀಕ್ಷೆಗೆ ಸಂಬಂಧಿಸಿದ ಪೇಪರ್ ಲೀಕ್ ಪ್ರಕರಣವು ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಆತಂಕ ಮತ್ತು ಅನಿಶ್ಚಿತತೆಯನ್ನು ಉಂಟುಮಾಡಿದೆ. ಹಲವು ವರ್ಷಗಳ ಪರಿಶ್ರಮದಿಂದ ಪರೀಕ್ಷೆಗೆ ಸಿದ್ಧರಾದ




ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗಿರುವ ಹಿನ್ನೆಲೆಯಲ್ಲಿ ಈ ಹೋರಾಟವನ್ನು ಆಯೋಜಿಸಲಾಗಿದೆ ಎಂದು ಸಂಘಟನೆಯ ಪದಾಧಿಕಾರಿಗಳು ತಿಳಿಸಿದ್ದಾರೆ.ಪ್ರತಿಭಟನೆ ವೇಳೆ:ನೀಟ್ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಬೇಕು,ಪೇಪರ್ ಲೀಕ್ ಪ್ರಕರಣ–ಕ್ಕೆ ಹೊಣೆಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವ ಕ್ರಮಗಳನ್ನು ಸರ್ಕಾರ ತಕ್ಷಣ ಜಾರಿಗೊಳಿಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಲಾಗುತ್ತದೆ.ಈ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಣ ಹಿತೈಷಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಎಸ್ ಐ ಓ ಸಂಘಟನೆಯ ಅಧ್ಯಕ್ಷ ಇಮ್ತಿಯಾಜ್ ಅವರು ಮನವಿ ಮಾಡಿದ್ದಾರೆ.